ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 12 ಸಂಚಿಕೆ 52 ಡಿಸೆಂಬರ್ 30, 1990 1-50



ಮಿನಿ ಬಜೆಟ್‌ನ ಹೊರೆ ಯಾರ ಮೇಲೆ?

ಚಂದ್ರಶೇಖರ್ ಸರಕಾರದ ಜನ ವಿರೋಧಿ ಕೃತ್ಯವನ್ನು ಪ್ರತಿಭಟಿಸಲು ಪಿ.ಬಿ. ಕರೆ

ವಾರ್ಷಿಕ ಬಜೆಟನ್ನು ಸಂಸತ್ತಿನಲ್ಲಿ ...ಸುವ ಕೇವಲ ಎರಡೂವರೆ ತಿಂಗಳ ...ಲೇ ಒಂದು ಮಿನಿ ಬಜೆಟ್ ಬಂದಿದೆ. ...ಳ, ಬೆಲೆಯೇರಿಕೆ ಹೊರೆಯಿಂದ ಜನ-ಸಾಮಾನ್ಯರನ್ನು ರಕ್ಷಿಸಲೆಂದು ಶ್ರೀಯುತ ಚಂದ್ರಶೇಖರ್ ಈ ಬಜೆಟನ್ನು ದೇಶಕ್ಕೆ ಇಷ್ಟು ತುರ್ತಿನಲ್ಲಿ ಅರ್ಪಿಸಿದ್ದಾರೆಯೇ? ಕಾಂಗ್ರೆಸ್‌ನವರೂ ಸೇರಿದಂತೆ ಯಾರಿಗೂ ಈ ಬಗ್ಗೆ ಸಂದೇಹವೇ ಇಲ್ಲ. ಚಂದ್ರಶೇಖರ್ ಸರಕಾರ 1340 ಕೋಟಿ ರೂ.ಗಳ ಹೊಸ ತೆರಿಗೆ ಹೇರಿದೆ.

ಇಡೀ ಮಾರುಕಟ್ಟೆಗೆ ಬೆಂಕಿ ಬಿದ್ದಿರುವಾಗ, ಜನಸಾಮಾನ್ಯರ ಬದುಕೇ ದುಸ್ತರವಾಗಿರುವಾಗ,

ಯಾವುದೋ ಮಹಾನ್ ಉದ್ದೇಶ ಸಾಧನೆಗೋ ಎಂಬಂತೆ ಸಂಸದೀಯ ರೀತಿನೀತಿಗಳನ್ನು ಉಲ್ಲಂಘಿಸಿ ಅಧಿಕಾರಕ್ಕೇರಿದ ಜನತಾದಳ(ಎಸ್) ತೋರಿಕೆಗಾದರೂ ಜನರ ಬವಣೆಗಳತ್ತ ಸ್ವಲ್ಪ ಗಮನಹರಿಸಬಹುದು ಎಂದು ಎಲ್ಲೋ ಕೆಲವರಲ್ಲಿದ್ದ ತುಸು ನಿರೀಕ್ಷೆಯೂ ತೇಲಿ ಹೋಗಿದೆ.

ಈ ಸುಂಕ ಹೆಚ್ಚಳದಿಂದ ಕೇವಲ ದೊಡ್ಡ ಬಂಡವಾಳದಾರರಿಗೆ ತೊಂದರೆಯಾಬಹುದು ಎಂಬ ಭಾವನೆ ಮೂಡಿಸಲು ಪ್ರಯತ್ನಿಸಲಾಗುತ್ತಿದೆ. ಇದು ಶುದ್ಧ ಬೊಗಳೆ. ಹೆಚ್ಚಿದ ಸುಂಕದ ಪ್ರತಿಯೊಂದು ಪೈಸೆಯೂ ಬಳಕೆದಾರರ ತಲೆಯ ಮೇಲೆಯೇ ವರ್ಗಾವಣೆಯಾಗುವುದು-ಇದು 43ವರ್ಷಗಳಿಂದ ಈ ದೇಶದ ಬಡ ಜೋರೆಗೌಡನ ಅನುಭವ.

ಇಂತಹ ಅಪಾರ ಸುಂಕ ಹೆಚ್ಚಳಕ್ಕೆ ಚಂದ್ರಶೇಖರ್ ಸರಕಾರ ನೀಡಿರುವ ಸಬೂಬು ಏನು? ಬಜೆಟ್ ಖೋತಾ ಹೆಚ್ಚಿದೆ- ನಿರೀಕ್ಷಿತ ರೆವಿನ್ಯೂ ಆದಾಯ ಬಂದಿಲ್ಲ. ಇದಕ್ಕೆ ಯಾರು ಹೊಣೆ? ನೇರವಾಗಿ ಸರಕಾರವೇ. ಆದಕ್ಕಾಗಿ ಜನಸಾಮಾನ್ಯರಿಗೆ ಏಕೆ ಬರಹಾಕಬೇಕು ಎಂದು ಈ ಅಸಹ್ಯ ಹೊರೆ ಹೇರಿದ ಜನತಾದಳ(ಎಸ್) ಸರಕಾರದ ಕೃತ್ಯವನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ತೀವ್ರವಾಗಿ ಖಂಡಿಸಿದೆ.

ಅಭೂತಪೂರ್ವ ಬೆಲೆಯೇರಿಕೆಯಿಂದ ಜನ ತತ್ತರಿಸಿ ಹೋಗಿದ್ದಾರೆ. ಹಣದುಬ್ಬರದ ದರ ಎರಡಂಕಿಯನ್ನು ದಾಟುವ ಸನ್ನಿವೇಶದಲ್ಲಿ ಬಡ ಜನರ ಸ್ಥಿತಿಯೇನು ಎಂದು ಯಾರೂ ಊಹಿಸಿಕೊಳ್ಳಬಹುದು. ಚಂದ್ರಶೇಖರ್ ಸರಕಾರದ ಈ ಅತ್ಯಂತ ಜನ ವಿರೋಧಿ ಕ್ರಮ ಮುಳುಗುತ್ತಿರುವವರಿಗೆ ಹುಲ್ಲು ಕಡ್ಡಿಯ ನೆರವಿನ ನಿರೀಕ್ಷೆಯೂ ಇಲ್ಲದಂತೆ ಮಾಡಿದೆ. ಸರಕಾರದ ಈ ಕ್ರಮಕ್ಕೆ ಪ್ರಬಲ ವಿರೋಧ ವ್ಯಕ್ತಪಡಿಸಬೇಕೆಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಕರೆ ನೀಡಿದೆ.

ವಿ.ಜೆ.ಕೆ.ನಾಯರ್ ಬಂಧನಕ್ಕೆ ಖಂಡನೆ

ಪಶ್ಚಿಮ ಕೋಸ್ಟ್ ಪೇಪರ್ ಮಿಲ್ಸ್ ನೌಕರರ ಸಂಘದ ಅಧ್ಯಕ್ಷರೂ ಆಗಿರುವ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಸಿಪಿಐ(ಎಂ) ಸೆಕ್ರೆಟರಿಯಟ್ ಸದಸ್ಯ ವಿ.ಜೆ.ಕೆ.ನಾಯರ್‌ರವರನ್ನು ಮುಷ್ಕರ ನಿರತ ಕಾರ್ಮಿಕರಿಗೆ ನೇತೃತ್ವ ನೀಡುತ್ತಿದ್ದಾಗ ...ಲಿಯಲ್ಲಿ ಡಿಸೆಂಬರ್ 24 ರಂದು ಪೋಲೀಸರು ಬಂಧಿಸಿರುವುದನ್ನು ಸಿಐಟಿಯು ...ಸಮಿತಿ ಬಲವಾಗಿ ಖಂಡಿಸಿದೆ.

ಕಾಂ: ವಿ.ಜೆ.ಕೆ.ನಾಯರ್ ಜೊತೆಗೆ ಸಂಘದ ಇತರ ಪದಾಧಿಕಾರಿಗಳನ್ನು ಬಂಧಿಸ...ದೆ. ತಮ್ಮ ಬೇಡಿಕೆಗಳಿಗಾಗಿ ಕಾರ್ಮಿಕರು ನಡೆಸುತ್ತಿರುವ ಈ ಹೋರಾಟದಲ್ಲಿ ...ಸರ ಹಸ್ತಕ್ಷೇಪ ಖಂಡನೀಯ, ಮ್ಯಾನೇಜ್‌ಮೆಂಟಿನ ಆದೇಶದಂತೆ ಪೋಲೀಸರು ...ತಿ ವರ್ತಿಸಿರುವುದು ಕಾರ್ಮಿಕರ ಐಕ್ಯತೆ ಮುರಿಯುವ ದುರುದ್ದೇಶದಿಂದ. ತಕ್ಷಣ ... ಬಂಧಿತರನ್ನು ಬಿಡುಗಡೆ ಮಾಡಬೇಕೆಂದು ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ...ನಂಜುಂಡಪ್ಪ ಒತ್ತಾಯಿಸಿದ್ದಾರೆ.

ಒಳಪುಟಗಳಲ್ಲಿ

ಮಾರ್ಚ್ 15 : "ಸಾರ್ವಜನಿಕ ಕ್ಷೇತ್ರ ರಕ್ಷಿಸಿ" ದಿನ

ಎರಡನೇ ಅಖಿಲ ಭಾರತ ಸಮ್ಮೇಳನದ ಕರೆ

ದೇಶೀ ವಿದೇಶೀ ಬಂಡವಾಳಗಾರರ ಆದೇಶದಂತೆ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ಖಾಸಗೀಕರಣಗೊಳಿಸುವ ಕೇಂದ್ರ ಸರ್ಕಾರದ ನೀತಿ ಸಾರ್ವಜನಿಕ ಕ್ಷೇತ್ರವನ್ನೇ ನಾಶಮಾಡಬಹುದಾಗಿದೆ. 1950 ರ ಕೈಗಾರಿಕಾ ಧೋರಣೆ ಹೇಳಿಕೆಯನ್ನು ಗಾಳಿಗೆ ತೂರಿರುವ ಸರ್ಕಾರ 232 ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ 85 ಸಾವಿರ ರೂ. ಬಂಡವಾಳ ಹೂಡಿದ್ದರೂ ಅವುಗಳ ಅಭಿವೃದ್ಧಿಗಾಗಿ ಯಾವ ಕ್ರಮವನ್ನೂ ಕೈಗೊಳ್ಳುತ್ತಿಲ್ಲ. ಅಸಮರ್ಪಕ ಆಡಳಿತ, ಭ್ರಷ್ಟಾಚಾರ, ಹೊರಗಿನವರಿಗೆ ಕಾಂಟ್ರಾಕ್ಟ್, ಅನಾವಶ್ಯಕ ಬಿಡಿಭಾಗಗಳ ಖರೀದಿ, ಉತ್ಪಾದನಾ ಸಾಮರ್ಥ್ಯದ ಪೋಲು, ಆಳುವ ಪಕ್ಷಗಳ ಬೊಕ್ಕಸ ತುಂಬಲು ಅವುಗಳ ದುರುಪಯೋಗ ಇತ್ಯಾದಿಗಳಿಂದಾಗಿ ದೇಶ ತೊಡಗಿಸಿದ ಅಪಾರ ಬಂಡವಾಳ ಪೋಲಾಗುತ್ತಿದೆ.

ಸರ್ಕಾರದ ಈ ದುರಾಡಳಿತ ಹಾಗೂ ಖಾಸಗೀ ಬಂಡವಾಳಗಾರರಿಗೆ ತಲೆಬಾಗುವ ನೀತಿಯಿಂದ ದೇಶದ ಸರ್ವತೋಮುಖ ಅಭಿವೃದ್ಧಿ ಹಾಗೂ ಸಮತೋಲನದ ಅಭಿವೃದ್ಧಿಗೆ ಅವಶ್ಯಕವಾದ ಸಾರ್ವಜನಿಕ ಕ್ಷೇತ್ರವನ್ನು ರಕ್ಷಿಸಲು 22 ಲಕ್ಷ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು, ಅಧಿಕಾರಿಗಳೇ ಮುಂದೆ ಬರಬೇಕಾಗಿದೆ. ಅದ್ದರಿಂದ ಮಾರ್ಚ್ 15, 1991 ನ್ನು ಸಾರ್ವಜನಿಕ ಸಭೆ, ಮೆರವಣಿಗೆಗಳ ಮೂಲಕ 'ಸಾರ್ವಜನಿಕ ಕ್ಷೇತ್ರ ರಕ್ಷಿಸಿ' ದಿನವಾಗಿ ಆಚರಿಸಬೇಕೆಂದು ಬೆಂಗಳೂರಿನಲ್ಲಿ ಡಿಸೆಂಬರ್ 20 ಹಾಗೂ ...ರಂದು ನಡೆದ ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಎರಡನೇ ಅಖಿಲ ಭಾರತ ಸಮ್ಮೇಳನ ನಿರ್ಧರಿಸಿದೆ.

ಇದಲ್ಲದೆ ಸಾರ್ವಜನಿಕ ಕ್ಷೇತ್ರದ ...ರರ ಹಿತಾಸಕ್ತಿಗಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ರೂಪಿಸಲು ಸಮ್ಮೇಳನ ನಿರ್ಧರಿಸಿತು.

1. ಖಾಸಗೀಕರಣದ ವಿರುದ್ಧ ಎಲ್ಲಾ ಮುಖ್ಯ ಕೇಂದ್ರಗಳಲ್ಲಿ ಪ್ರಾದೇಶಿಕ ಸಮಾವೇಶಗಳನ್ನು ನಡೆಸಿ ಅಂತ್ಯದಲ್ಲಿ ಅಖಿಲ ಭಾರತ ಸಮಾವೇಶ ನಡೆಸುವುದು.

2. ರೋಗಗ್ರಸ್ತ ಸಾರ್ವಜನಿಕ ಉದ್ದಿಮೆಗಳ ಪುನಶ್ಚೇತನಕ್ಕಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದ ಹಿನ್ನೆಲೆಯಲ್ಲಿ ಒಂದು ...ಶ ಸಮಾವೇಶ ನಡೆಸುವುದು.

ಸಾರ್ವಜನಿಕ ಉದ್ದಿಮೆಗಳ ಸಂಘಟನೆ... ಮತ್ತು ಸಿ.ಐ.ಟಿ.ಯು., ಅಧಿ... ವರ್ಗದ ಸಂಘಟನೆಯು ಜೊತೆ ಸೇರಿ ಸಾರ್ವಜನಿಕ ಉದ್ದಿಮೆಗಳ ರಕ್ಷಣೆ ಹಾಗೂ ...ಗಳನ್ನು ಬಲಪಡಿಸುವ ಹೋರಾಟ ನಡೆಸುವುದು ಸ್ವಾಗತಾರ್ಹ ಬೆಳವಣಿಗೆ ಎಂದಿರುವ ಸಮ್ಮೇಳನ ಈ ಐಕ್ಯತೆಯನ್ನು ಬೆಳೆಸಬೇಕೆಂದು ಕರೆ ನೀಡಿದೆ.

12 ರಾಜ್ಯಗಳ 99 ಸಾರ್ವಜನಿಕ ಕ್ಷೇತ್ರಗಳ ಉದ್ದಿಮೆಗಳಿಂದ 350 ಪ್ರತಿನಿಧಿಗಳು ಭಾಗವಹಿಸಿದ ಈ ಎರಡನೇ ಅಖಿಲ ಭಾರತ ಸಮ್ಮೇಳನವನ್ನು ಸಿ.ಐ.ಟಿ.ಯು. ವಿರ್ಪಡಿಸಿದ್ದು, ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿ ಕಾಂ: ಸಮರ್ ಮುಖರ್ಜಿ ಡಿಸೆಂಬರ್ 20 ರಂದು ಇದನ್ನು ಉದ್ಘಾಟಿಸಿದರು.

ಇದಕ್ಕೆ ಮೊದಲು ಡಿಸೆಂಬರ್ 19 ರಂದು ವಿವಿಧ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸಲು ಮೊದಲ ಬಾರಿಗೆ ಮಹಿಳಾ ನೌಕರ, ಕಾರ್ಮಿಕರ ಸಮಾವೇಶ ನಡೆಯಿತು.(ಈ ಬಗ್ಗೆ ಪ್ರತ್ಯೇಕ ವರದಿ ನೋಡಿ)

ತಮ್ಮ ಉದ್ಘಾಟನಾ ಭಾಷಣದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬಿಕ್ಕಟ್ಟಿನ ಕುರಿತು ವಿವರಿಸಿದ ಕಾಂ: ಸಮರ್ ಮುಖರ್ಜೀಯವರು ದೇಶದ ಕಾರ್ಮಿಕ ವರ್ಗದ ಮೇಲೆ ಇವು ಯಾವ ರೀತಿ ಪರಿಣಾಮ ಬೀರುತ್ತದೆಂಬುದನ್ನು ವಿವರಿಸಿದರು.

ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಕೈಗೊಂಡಿರುವ ಮುಖ್ಯ ಹೋರಾಟ ಸರಕಾರದ ಜನ-ವಿರೋಧಿ ಧೋರಣೆಗಳ ವಿರುದ್ಧ ನಡೆಯುವ ಹೋರಾಟವಾಗಿದೆಯೆಂದು ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿಗಳು ಈ ಸುದೀರ್ಘ ಹೋರಾಟದೊಂದಿಗೆ, ಅದೇ ವೇಳೆಯಲ್ಲಿ ದೇಶದಲ್ಲಿ ಕೋಮು ಸೌಹಾರ್ದ ಕೆಡುತ್ತಿರುವಾಗ ಕಾರ್ಮಿಕ ವರ್ಗ ಬರೀ ಪ್ರೇಕ್ಷ...

ಪುಟ 8ಕ್ಕೆ

...ಕರಂತೆ ಉಳಿಯುವುದು ಸರಿಯಲ್ಲ ಎಂದು ಒತ್ತಿ ಹೇಳಿದರು. ಜಾತ್ಯಾತೀತತೆನ್ನು ರಕ್ಷಿಸುವ ಸಲುವಾಗಿ ಮೂಲಭೂತವಾದಿಗಳನ್ನು, ಜಾತೀಯವಾದಿಗಳನ್ನು ಸೋಲಿಸಲು ಕಾರ್ಮಿಕ ವರ್ಗ ಎಲ್ಲಾ ರೀತಿಯ ಹೋರಾಟ ನಡೆಸಬೇಕೆಂದು ಹೇಳಿದರು.

ಸಿ.ಐ.ಟಿ.ಯು. ಕಾರ್ಯದರ್ಶಿ ಮತ್ತು ಸಮನ್ವಯ ಸಮಿತಿ ಸಂಯೋಜಕರಾದ ಕಾಂ: ಎಂ.ಕೆ.ಪಂಧೆಯವರು ವರದಿ ಸಲ್ಲಿಸಿದರು.

ಹದಿನಾಲ್ಕು ಬೇಡಿಕೆಗಳಿಗಾಗಿ ಹೋರಾಟ

ಸಾರ್ವಜನಿಕ ವಲಯದ ಕಾರ್ಮಿಕರ ಆರ್ಥಿಕ ಬೇಡಿಕೆಗಳಲ್ಲದೆ ಬಹುರಾಷ್ಟ್ರೀಯ ಕಂಪನಿಗಳ, ಗುತ್ತೇದಾರಿಗಳ ಹಸ್ತಕ್ಷೇಪ ವಿರೋಧಿಸುವ, ಸಾರ್ವಜನಿಕ ವಲಯದ ಉದ್ದಿಮೆಗಳನ್ನು ರಕ್ಷಿಸಿ, ಅಭಿವೃದ್ಧಿ ಪಡಿಸುವ, ಇದರಲ್ಲಿ ಕಾರ್ಮಿಕರ ಸಮಾನ ಪಾಲುದಾರಿಕೆಗೆ ಒತ್ತಾಯಿಸುವ ಒಟ್ಟು 14 ಬೇಡಿಕೆಗಳ...

ಬೀದರ್‌ನಲ್ಲಿ ಪಾದಯಾತ್ರೆ

ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕೃಷಿ ಕೂಲಿಗಾರರ ಬೇಡಿಕೆಗಳ ಈಡೇರಿಕೆಗಾಗಿ ಜನವರಿ 21ರ ಬೆಂಗಳೂರು ಚಲೋ ಕಾರ್ಯಕ್ರಮದ ಅಂಗವಾಗಿ ಬೀದರ್‌ನಲ್ಲಿ ಡಿಸೆಂಬರ್ 21ರಂದು ಪಾದಯಾತ್ರೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಬೀದರ್ ಸಹಕಾರಿ ಕಾರ್ಖಾನೆಯ ಕಾರ್ಮಿಕರು ಹಾಗೂ ಸಂಘದ ಪದಾಧಿಕಾರಿಗಳು ಪಾದಯಾತ್ರಿಗಳನ್ನು ಸ್ವಾಗತಿಸಿದರು. ಸುಮಾರು 200 ಜನರು ಭಾಗವಹಿಸಿದ್ದ ಸಭೆಯಲ್ಲಿ 400 ರೂಗಳ ದೇಣಿಗೆ ಹಣ ಸಂಗ್ರಹಿಸಲಾಯಿತು. ನಂತರ ಹಳ್ಳಿ... ಬೀದರ್‌ನಲ್ಲಿ ಸಭೆ ನಡೆಸಲಾಯಿತು. ಬೀದಿನ ... [illegible]

[illegible] ಅಧ್ಯಕ್ಷತೆಯಲ್ಲಿ ಬಸವೇಶ್ವರ ಮೂರ್ತಿ ಹತ್ತಿರ ಸಭೆ ನಡೆಯಿತು. [illegible] ಬಾಡಿ, ನಂದಗಾವ್, ಹುಡಗಿ, ಹುಮನಾಬಾದ್ ತಾಲೂಕು ಕೇಂದ್ರಗಳಲ್ಲಿ ಸಭೆಗಳು ನಡೆದವು. ನಂದಗಾವ ಸಭೆಯಲ್ಲಿ ಸುಮಾರು 200 ... ಭಾಗವಹಿಸಿ, ಹುಮನಾಬಾದ್ ಸಭೆಯಲ್ಲಿ ನೂರಾರು ರೈತರು ಭಾಗವಹಿಸಿದ್ದರು. [illegible]

ತೈಲ ಬಿಕ್ಕಟ್ಟು-ರೈಲು ವಿದ್ಯುದೀಕರಣ ಪರಿಹಾರ

ರಸ್ತೆ ಸಾಗಾಣಿಕೆಗೆ ಡೀಸೆಲ್ ರೈಲು ಸಾಗಾಣಿಕೆಗಿಂತ ಐದು ಪಟ್ಟು ಹೆಚ್ಚು ಡೀಸೆಲ್ ಬೇಕು. ವಿದ್ಯುತ್ ರೈಲ್ವೆಗಿಂತ ಡೀಸೆಲ್ ರೈಲು ಸಾಗಾಣಿಕೆಗೆ ಮೂರು ಪಟ್ಟು ಹೆಚ್ಚು ಬೇಕು

ತೈಲ ಬಿಕ್ಕಟ್ಟು ಜಗತ್ತಿನಲ್ಲಿ ಅಲ್ಲೋಲ-ಕಲ್ಲೋಲಕ್ಕೆ ಕಾರಣವಾಗಿದೆ. ತೈಲದ ಪೂರೈಕೆಯಲ್ಲಿ ಏರುಪೇರು, ಭಾರಿ ಬೆಲೆ ಏರಿಕೆಯ ಪರಿಣಾಮಗಳೇ ಇದಕ್ಕೆ ಕಾರಣ. ಶೇಕಡಾ 40 ಕ್ಕಿಂತಲೂ ಹೆಚ್ಚು ತೈಲವನ್ನು ಆಮದು ಮಾಡುವ ಭಾರತದ ಮೇಲೆ ಹೊರೆ ಇನ್ನೂ ಭೀಕರವಾದುದು. ತೈಲ ಬಿಕ್ಕಟ್ಟು ಆರಂಭವಾಗುವ ಮೊದಲೇ ಇದ್ದ ಬ್ಯಾರೆಲ್‌ಗೆ 18 ಡಾಲರುಗಳ ಅಂತರರಾಷ್ಟ್ರೀಯ ಬೆಲೆಯಲ್ಲಿ ಭಾರತದ ತೈಲ ಆಮದಿನ ವೆಚ್ಚ ವರ್ಷಕ್ಕೆ ಆರುಸಾವಿರ ಕೋಟಿ ರೂ ಮುಟ್ಟಿತ್ತು. ಪ್ರತಿಯೊಂದು ಡಾಲರು ಏರಿಕೆಯಿಂದ ವಾರ್ಷಿಕ ವೆಚ್ಚ 400 ಕೋಟಿ ರೂ ಏರುತ್ತದೆ. ಇದರ ಜತೆ 8-9 ಬೇಡಿಕೆ ಏರಿಕೆ ತೆಗೆದುಕೊಂಡರೆ ಈ ವರ್ಷ ಎರಡರಿಂದ ಎರಡೂವರೆ ಸಾವಿರ ಕೋಟಿ ರೂ ಅಧಿಕ ವೆಚ್ಚವಾಗುವ ಸಂಭವವಿದೆ. ಅಂದರೆ ಮೂರನೇ ಒಂದು ಭಾಗ ಅಧಿಕ ವೆಚ್ಚ.

ಇದಕ್ಕೆ ಹಲವು ಪರಿಹಾರಗಳನ್ನು ಹೇಳಲಾಗುತ್ತದೆ. ಸೌರ ಶಕ್ತಿ, ಇತರ ಬತ್ತದ ಪ್ರಾಕೃತಿಕ ಸಾಧನಗಳ ಮೇಲೆ ಆಧರಿಸಿದ ಶಕ್ತಿ-ಮೂಲಗಳನ್ನು ಆಧರಿಸುವುದು ಇದಕ್ಕೆ ಪರಿಹಾರ ಎನ್ನಲಾಗುತ್ತದೆ. ಇದರಲ್ಲಿ ಏನೂ ಹುರುಳಿಲ್ಲ. ರೈಲ್ವೇ ಜಾಲವನ್ನು ಭಾರಿ ಪ್ರಮಾಣದಲ್ಲಿ ಏರಿಸುವುದು ದೂರಗಾಮಿ ದೃಷ್ಟಿಯಿಂದ ಈ ಸಮಸ್ಯೆಗೆ ನಿಜವಾದ ಪರಿಹಾರವೆಂದರೆ ಬಹುಶಃ ಆಶ್ಚರ್ಯವಾಗಬಹುದು. ಆದರೆ ಅದು ನಿಜ. ಸಾಗಾಣಿಕೆಗೆ ತೈಲದ ಉಪಯೋಗಕ್ಕಿಂತ ವಿದ್ಯುತ್ ಶಕ್ತಿಯ ಉಪಯೋಗ ಹೆಚ್ಚು ಮಿತವ್ಯಯದ್ದು. ಇದಕ್ಕಾಗಿ ವಿದ್ಯುತ್ ಉತ್ಪಾದನೆ ಏರಬೇಕು ನಿಜ. ಆದರೆ ತೈಲದ ಆದರಲ್ಲೂ ತೈಲ ಆಮದಿನ ದಾಸರಾಗಿರುವ ನಮಗೆ ಈಗಿರುವ ಒಂದೇ ಪರಿಹಾರ ಇದರ ಜೊತೆ ಸರಕುಸಾಗಾಣಿಕೆ ರಸ್ತೆಯಿಂದ ರೈಲ್ವೇಗೆ ಹೋಗುವಂತೆ ಅನುಕೂಲಕರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು.

ನಮ್ಮ ತೈಲ ಬೇಡಿಕೆಯ ಶೇಕಡಾ 48 ಸಾಗಾಣಿಕೆಗೆ ಖರ್ಚಾಗುತ್ತದೆ. ಆದ್ದರಿಂದ ಈ ಕ್ಷೇತ್ರದಲ್ಲಿ ಇಂಧನ ಉಳಿತಾಯಕ್ಕೆ ಹೆಚ್ಚಿನ ಪ್ರಯತ್ನ ಮಾಡಬೇಕು. ರೈಲು ಡೀಸೆಲ್ ತೈಲ ಬಳಸುತ್ತದೆ. ಆದರೆ ಯಾವುದೇ ಪ್ರಮಾಣದ ಸರಕು ಸಾಗಾಣಿಕೆಗೆ, ರಸ್ತೆಯಲ್ಲಿ ಹೋಗುವ ಡೀಸೆಲ್ ಟ್ರಕ್ಕು ಡೀಸೆಲ್ ರೈಲಿಗಿಂತ ಐದು ಪಟ್ಟು ಹೆಚ್ಚು ಡೀಸೆಲ್ ಖರ್ಚುಮಾಡುತ್ತದೆ. ಡೀಸೆಲ್ ರೈಲ್ವೇ ಅದೇ ಸರಕು ಸಾಗಾಣಿಕೆಗೆ ವಿದ್ಯುತ್ ರೈಲ್ವೇಗಿಂತ ಮೂರು ಪಟ್ಟು ಹೆಚ್ಚು ಶಕ್ತಿಖರ್ಚುಮಾಡುತ್ತದೆ. ಆದ್ದರಿಂದ ರಸ್ತೆಯ ಮೇಲೆ ಡೀಸೆಲ್ ಟ್ರಕ್ಕಿನಿಂದ ಸಾಗಾಣಿಕೆಯನ್ನು ವಿದ್ಯುತ್ ರೈಲ್ವೇಗೆ ಬದಲಾಯಿಸಿದರೆ ಶಕ್ತಿ ಉಳಿತಾಯ 15 ಪಟ್ಟು ಆಗುವ ಸಾಧ್ಯತೆ ಇದೆ. ರೈಲು ವಿದ್ಯುದೀಕರಣಕ್ಕೆ ಬೇಕಾದ ಇಂಧನಕ್ಕೆ ಕಲ್ಲಿದ್ದಲು, ಜಲಶಕ್ತಿ ಮತ್ತು ಪ್ರಾಕೃತಿಕ ಗ್ಯಾಸ್ ಆಧರಿಸಬಹುದು. ಈ ಇಂಧನಗಳು ಸಂಪೂರ್ಣ ಉಪಯೋಗವಾಗದೆ ಪೋಲಾಗುತ್ತಿವೆ. ಈಗ ರೈಲ್ವೇ ದೇಶದ ವಿದ್ಯುತ್ ಶಕ್ತಿಯ ಕೇವಲ ಎರಡೂವರೆ ಶೇಕಡಾ ಬಳಸುತ್ತಿದೆ. ಎಲ್ಲಾ ರೈಲು ದಾರಿಗಳ ವಿದ್ಯುದೀಕರಣವಾದರೆ, ಒಟ್ಟು ಶೇಕಡಾ 17 ವಿದ್ಯುತ್ ಬಳಸಬಹುದು.

ರಸ್ತೆ ಸಾಗಾಣಿಕೆ ರೈಲು ಸಾಗಾಣಿಕೆಗಿಂತ ಹೆಚ್ಚಿನ ಪ್ರಾಮುಖ್ಯತೆ ಪಡೆದಿರುವುದು ಇತ್ತೀಚಿನ ಬದಲಾವಣೆ. ಸ್ವಾತಂತ್ರ್ಯಪೂರ್ವ ದಿನಗಳಿಂದ ಇತ್ತೀಚಿನವರೆಗೆ ರೈಲು ಸಾಗಾಣಿಕೆ ರಸ್ತೆ ಸಾಗಾಣಿಕೆಗಿಂತ ಹೆಚ್ಚು ಜನಪ್ರಿಯ ಮತ್ತು ಅಗ್ಗವಾಗಿತ್ತು. ಬ್ರಿಟಿಷರು ಸ್ವಾತಂತ್ರ್ಯಪೂರ್ವ ಕಾಲದಲ್ಲಿ ರೈಲನ್ನು ತಮ್ಮ ಆರ್ಥಿಕ, ರಾಜಕೀಯ ದೃಷ್ಟಿಗೆ ಅನುಗುಣವಾಗಿ ಬೆಳೆಸಿದ್ದರು. ರಸ್ತೆಗಳ ನಿರ್ಮಾಣ ಕಡೆಗಣಿಸಿದ್ದರು. ಆದರೆ ಸ್ವಾತಂತ್ರ್ಯಾನಂತರ ಹೆಚ್ಚು ಹೆಚ್ಚು ರಸ್ತೆಗಳ ನಿರ್ಮಾಣ ಮತ್ತು ಡೀಸೆಲ್‌ಗೆ ಬೆಲೆಯಲ್ಲಿ ಸಬ್ಸಿಡಿ ಇದರಿಂದ ಕ್ರಮೇಣ ರಸ್ತೆ ಸಾಗಾಣಿಕೆ ಜನಪ್ರಿಯವಾಯಿತು. 1987-88 ರ ಹೊತ್ತಿಗೆ ರಸ್ತೆ ಮೂಲಕ ಡೀಸೆಲ್ ಟ್ರಕ್ಕುಗಳಲ್ಲಿ ಸಾಗಾಣಿಕೆ ಒಟ್ಟು ಸಾಗಾಣಿಕೆಯ ಶೇಕಡಾ 51 ಕ್ಕೆ ಏರಿತು.ಒಟ್ಟು ಡೀಸೆಲ್‌ನ ಶೇಕಡಾ 42 ಭಾಗ ರಸ್ತೆ ಸಾಗಾಣಿಕೆಗೆ ಖರ್ಚಾಗುತ್ತದೆ. ಡೀಸೆಲ್ ರೈಲುಗಳು ಸಾಗಾಣಿಕೆಯ ಶೇಕಡಾ 31 ರಷ್ಟನ್ನು ಒಯ್ಯುತ್ತವೆ. ಆದರೆ ಒಟ್ಟು ಡೀಸೆಲ್‌ನ ಶೇಕಡಾ 7 ರಿಂದ 8 ರಷ್ಟು ಮಾತ್ರ ಬಳಸುತ್ತವೆ. ಇದು ಸಾಧ್ಯವಾಗಿರುವುದು ರೈಲು ಗಾಡಿಯ ಬೆಳವಣಿಗೆ ಮತ್ತು ಅದರ ವಿದ್ಯುದೀಕರಣದ ಬಗ್ಗೆ ಸರಕಾರ ಅಸಡ್ಡೆ ತೋರಿಸಿರುವುದರಿಂದ ಈ ಅಲಕ್ಷ್ಯ ಯಾಕೆಂದರೆ ರೈಲಿಗೆ ರಸ್ತೆಗಿಂತ ಎಷ್ಟೋ ಪಟ್ಟು ಹೆಚ್ಚು ಬಂಡವಾಳ ಹೂಡಬೇಕಾಗುತ್ತದೆ. ಆದರೆ ಶಕ್ತಿ ಮಿಗಿತಾಯ, ತೈಲದ ಮೇಲೆ ಕಡಿಮೆ ಅವಲಂಬನೆ, ಈ ವಿಷಯಗಳನ್ನು ಅಷ್ಟಾಗಿ ಗಮನಕ್ಕೆ ತೆಗೆದುಕೊಂಡಂತಿಲ್ಲ. ರೈಲು ದಾರಿಗಳ ಬೆಳವಣಿಗೆಗಳಲ್ಲಿ ಪ್ರಾದೇಶಿಕ ಅಸಮಾನತೆಯೂ ಹೆಚ್ಚು. ಈಶಾನ್ಯ, ಮಧ್ಯ ಭಾರತ, ದಕ್ಷಿಣ ಮತ್ತು ಪಶ್ಚಿಮ ರಾಜಸ್ಥಾನ ರೈಲು ದಾರಿ ಬೆಳೆಯದ ಹಿಂದುಳಿದ ಕ್ಷೇತ್ರಗಳು. ಭಾರತ 62 ಸಾವಿರ ಕಿ.ಮೀ. ವಿದ್ಯುತ್ ದಾರಿ ಹೊಂದಿದೆ. ಇದರಲ್ಲಿ ಕೇವಲ 8 ಸಾವಿರ ಕಿ.ಮೀ. ವಿದ್ಯುತ್ ದಾರಿಯನ್ನು ಸ್ವಾತಂತ್ರ್ಯಾ ನಂತರ ಹಾಕಲಾಗಿದೆ. 62 ಸಾವಿರ ಕಿ.ಮೀ.ರೈಲು ದಾರಿಗಳಲ್ಲಿ ಕೇವಲ 9 ಸಾವಿರ ಮಾತ್ರ ವಿದ್ಯುದೀಕರಣವಾಗಿದೆ ಅಂದರೆ ಶೇಕಡಾ 14 ರೈಲು ವಿದ್ಯುದೀಕರಣವಾಗಿದೆ.

ಬೇರೆ ದೇಶಗಳಲ್ಲಿ ಪರಿಸ್ಥಿತಿ ಏನಿದೆ? 70 ರ ದಶಕದ ತೈಲ ಬಿಕ್ಕಟ್ಟಿನ ನಂತರ ಹೆಚ್ಚಿನ ಅಭಿವೃದ್ಧಿ ದೇಶಗಳಲ್ಲಿ ರೈಲು ವಿದ್ಯುದೀಕರಣ ಯೋಜನೆಯನ್ನು ದೊಡ್ಡದಾಗಿ ಹಾಕಿಕೊಳ್ಳಲಾಯಿತು. ಕೆಲವು ಪ್ರಮುಖ ದೇಶಗಳಲ್ಲಿ ರೈಲು ವಿದ್ಯುದೀಕರಣದ ಶೇಕಡಾವಾರು ಹೀಗಿದೆ: ಫ್ರಾನ್ಸ್-34, ಇಟಲಿ-56, ಬ್ರಿಟನ್-25, ಸ್ವೀಡನ್-64,. ಸೋವಿಯತ್ ಒಕ್ಕೂಟ-35. ತೈಲ ಪೂರೈಕೆಯಲ್ಲಿ ಸ್ವಯಂಪರಿಪೂರ್ಣವಾಗಿರುವ ಸೋವಿಯತ್ ಒಕ್ಕೂಟ ಮತ್ತು ಚೀನಾ ದೊಡ್ಡ ಪ್ರಮಾಣದ ರೈಲು ವಿದ್ಯುದೀಕರಣದ ಯೋಜನೆ ಹಾಕಿಕೊಂಡಿವೆ. ಏಕೆಂದರೆ ವಿದ್ಯುದೀಕರಿಸಿದ ರೈಲುಸಾಗಾಣಿಕೆ ರಸ್ತೆ ಸಾಗಾಣಿಕೆಗಿಂತ ಹೆಚ್ಚು ಮಿತವ್ಯಯಕಾರಿಯಾದದ್ದು.

ಭಾರತದಲ್ಲಿ ರೈಲು ವಿದ್ಯುದೀಕರಣ ಆಮೆ ವೇಗದಲ್ಲಿ ಸಾಗಿದೆ. 50 ರ ದಶಕದಲ್ಲಿ ಆರಂಭವಾದ ರೈಲು ವಿದ್ಯುದೀಕರಣ ವರ್ಷಕ್ಕೆ 214 ಕಿ.ಮೀ.ನ ದರದಲ್ಲಿ ಸಾಗಿದೆ. ಕಳೆದ ಹಲವು ಪಂಚವಾರ್ಷಿಕ ಯೋಜನೆಗಳಲ್ಲಿ ರೈಲು ವಿದ್ಯುದೀಕರಣದ ಪ್ರಾಮುಖ್ಯತೆ ಕಡಿಮೆ ಮಾಡಲಾಗಿದೆ. ಇದಕ್ಕೆ ಯೋಜನಾಕಾರರು ಕೊಟ್ಟಿರುವ ಕಾರಣ ವಿದ್ಯುತ್ ಅಭಾವ. ರೈಲು ಸಾಗಾಣಿಕೆಗಿಂತ ರಸ್ತೆ ಸಾಗಾಣಿಕೆಗೆ ಇದರಿಂದ ಕುಮ್ಮಕ್ಕು ಕೊಟ್ಟಂತೆ-- ನಮ್ಮಲ್ಲಿ ಡೀಸೆಲ್ ಪೂರೈಕೆ ಬೇಕಾದಷ್ಟಿದೆ ಎಂಬಂತೆ ಯೋಜನಾಕಾರರು ವರ್ತಿಸುತ್ತಿದ್ದಾರೆ. ಪ್ರಸಕ್ತ ಯೋಜನೆಯಲ್ಲೂ ಪ್ರಮುಖ ರೈಲು ಮಾರ್ಗಗಳಾದ ಎರ್ನಾಕುಲಂ-ತಿರುವನಂತಪುರ, ನಿಂಪ್ರುರಾ- ಖುರ್ದಾರೋಡ್-ವಾಲ್ಟೇರ್-ಪುಣೆ-ದೌಂಡ್-ವಾಡಿ, ಉದ್ನಾ-ಜಲಗಾಂವ್, ಪಟ್ನಾ- ಮುಗಲ್‌ಸರಾಯ್, ಇವುಗಳ ವಿದ್ಯುದೀಕರಣವನ್ನು ಕೈಬಿಡಲಾಗಿದೆ.

ಈಗಿರುವ ಮಟ್ಟದ ವಿದ್ಯುದೀಕರಣದಿಂದಲೇ ರೈಲ್ವೇ ಪ್ರತಿವರ್ಷ 250 ಕೋಟಿ ರೂ. ಗಳಷ್ಟು ಉಳಿತಾಯ ಮಾಡುತ್ತಿದೆ. ಆದರೆ ವಿದ್ಯುದೀಕರಣದ ಅಭಾವದಿಂದ ರೈಲ್ವೇಯ ಡೀಸೆಲ್ ಬೇಡಿಕೆ 15 ವರ್ಷಗಳಲ್ಲಿ 3 ರಷ್ಟು ಹೆಚ್ಚಬಹುದು.

ಈ ತೈಲ ಬಿಕ್ಕಟ್ಟಿನ ಅವಧಿಯಲ್ಲಿ ನಾವು ಪ್ರಾರಂಭಿಸಬೇಕಾದ ದೂರಗಾಮಿ ನೀತಿಗಳಲ್ಲಿ ಒಂದೆಂದರೆ ವಿದ್ಯುತ್ ಉತ್ಪಾದನೆ - ದೇಶದಲ್ಲೇ ಲಭ್ಯವಿರುವ ಕಲ್ಲಿದ್ದಲು, ಜಲಶಕ್ತಿ ಮತ್ತು ಇತರ ಮೂಲಗಳಿಂದ- ಹೆಚ್ಚಿಸುವುದು. ಆ ಮೂಲಕ ರೈಲು ವಿದ್ಯುದೀಕರಣ ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲು ಅವಕಾಶ ಮಾಡಿಕೊಡುವುದು. ಕೆಲವು ತಜ್ಞರು ಪ್ರತಿವರ್ಷ ಸಾವಿರ ಕಿ.ಮೀ. ರೈಲುಮಾರ್ಗವಿದ್ಯುದೀಕರಣ- ಕಾರ್ಯಸಾಧ್ಯ ಗುರಿ ಎಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಬೇಕಾದ ಸಂಪನ್ಮೂಲ ರೈಲು ಬಜೆಟ್‌ನ ಶೇಕಡಾ 6 ರಿಂದ 7 ರಷ್ಟು.

ಇಷ್ಟೆಲ್ಲಾ ತರ್ಕಬದ್ಧ ಕಾರಣಗಳಿದ್ದರೂ ಸರಕಾರ ಮತ್ತು ಯೋಜನಕಾರರು ಈ ನೀತಿ ಅನುಸರಿಸದಿರುವುದು ಇದರ ಬಗ್ಗೆ ಅಜ್ಞಾನದಿಂದಲ್ಲ. ಇದು ಬಹುರಾಷ್ಟ್ರೀಯ ಸಂಸ್ಥೆಗಳ ತೈಲ ಲಾಬಿ ಮತ್ತು ದೇಶದಲ್ಲಿರುವ ಅವರ ಬಾಲಬಡುಕರ ಒತ್ತಡದಿಂದ. ಐ.ಎಂ.ಎಫ್. - ಮತ್ತು ವಿಶ್ವಬ್ಯಾಂಕ್‌ನ ಹೆಚ್ಚಿನ ಯೋಜನೆಗಳು ತೈಲವನ್ನು ಇಂಧನವನ್ನಾಗಿ ಬಳಸುವ ತಂತ್ರಜ್ಞಾನಗಳಿಗೆ ಕುಮ್ಮಕ್ಕು ಕೊಡುತ್ತವೆ. ನಮ್ಮ ದೇಶದ ಆರ್ಥಿಕತೆಯಲ್ಲಿ ತೈಲ ಆಮದಿನ ಪ್ರಾಮುಖ್ಯತೆ ಕಡಿಮೆ ಮಾಡುವ ಕ್ರಮ ಸಾಮ್ರಾಜ್ಯಶಾಹಿಯ ಹಿಡಿತಕ್ಕೆ ಮಾರಕ. ದೇಶದ ಸ್ವಾತಂತ್ರ್ಯ, ಸಾರ್ವಭೌಮತೆ ಮತ್ತು ಸ್ವಾವಲಂಬನೆ ಕಾಪಾಡಲು ಪೂರಕ. ಆದ್ದರಿಂದ ರೈಲು ವಿದ್ಯುದೀಕರಣದ ಸಲಹೆಯನ್ನು ದೇಶಪ್ರೇಮಿ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಈ ಅನುಕೂಲಕರ ಪರಿಸ್ಥಿತಿಯಲ್ಲಿ ಜನರಿಗೆ ಮನದಟ್ಟು ಮಾಡಿಕೊಡಬೇಕು. ಸರಕಾರದ ಮೇಲೆ ಇದಕ್ಕಾಗಿ ಒತ್ತಡ ತರಬೇಕು.

“ಕಾಂಟ್ರಾಕ್ಟ್ ಕ್ಯಾಂಟೀನ್ ರದ್ದು ಪಡಿಸಿ ರೈಲ್ವೆ ಇಲಾಖೆಯೇ ವಹಿಸಿಕೊಳ್ಳಲಿ”

ಕ್ಯಾಂಟೀನ್ ಕೆಲಸಗಾರರ ಸಮ್ಮೇಳನದ ಒತ್ತಾಯ

ಬೆಂಗಳೂರು:-ರೈಲ್ವೇ ಕ್ಯಾಂಟೀನ್ ಕೆಲಸಗಾರರ ಹೋರಾಟವನ್ನು ಸದೃಢವಾಗಿ ಕಟ್ಟಿ ಬೆಳೆಸಿ ಕಾಂಟ್ರಾಕ್ಟ್ ಕ್ಯಾಂಟೀನ್ ಕಾರ್ಮಿಕರನ್ನು ಒಂದೇ ಬಾವುಟದ ಅಡಿಯಲ್ಲಿ ಸಂಘಟಿಸಿ, ಅವರ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಟದ ಪ್ರಕ್ರಿಯೆಗೆ ಈ ಸಮಾವೇಶವು ನಾಂದಿಯಾಗಲಿ ಎಂದು ಸಿಪಿಐ(ಎಂ) ಸಂಸತ್ ಸದಸ್ಯ ಸುನಿಲ್ ಬಸು ರಾಯ್ ಹೇಳಿದರು. ಅವರು ಡಿಸೆಂಬರ್ 22 ರಂದು ದಕ್ಷಿಣ ರೈಲ್ವೇ ಕ್ಯಾಂಟೀನ್ ವರ್ಕರ್ಸ್ ಯೂನಿಯನ್ನಿನ ಮೊದಲ ಸಮಾವೇಶವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು. ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರಾದ ಕಾಂ:ಸೂರ್ಯನಾರಾಯಣರಾವ್ ಮಾತನಾಡುತ್ತ ಜಾತಿ, ಮತ, ಭಾಷೆ ಇವೆಲ್ಲವುಗಳ ಭೇದವಿಲ್ಲದೆ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ನಡೆಸುವ ಹೋರಾಟಕ್ಕೆ ಸಿಐಟಿಯುವಿನ ಸಂಪೂರ್ಣ ಸಹಕಾರ ಬೆಂಬಲವನ್ನು ವ್ಯಕ್ತಪಡಿಸಿದರು.

ಕಾಂ:ಇ.ಕೆ.ಎನ್.ರಾಜನ್, ಕಾಂ:ವಿ.-ಪಳನಿ, ಕಾಂ:ಎ.ಆರ್.ಕುಮಾರನ್ ಈ ಮೂವರ ಅಧ್ಯಕ್ಷ ಮಂಡಳಿ ಸಮಾವೇಶದ ಕಾರ್ಯಕಲಾಪಗಳನ್ನು ನಡೆಸಿಕೊಟ್ಟಿತು.

ತಮಿಳುನಾಡು, ಕೇರಳ, ಕರ್ನಾಟಕ ಈ ಮೂರೂ ರಾಜ್ಯಗಳಿಂದ ಬಂದ 150 ಜನ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ದೇಶದಲ್ಲಿ ಇತ್ತೀಚೆಗೆ ನಡೆದ ಕೋಮುಗಲಭೆಗಳಲ್ಲಿ ಅಸುನೀಗಿದ ಮುಗ್ಧ ಜನರಿಗೆ ಸಭೆಯು ಸಂತಾಪವನ್ನು ಸೂಚಿಸುವುದಲ್ಲದೆ, ಬಿ.ಜೆ.ಪಿ.-ಆರ್.ಎಸ್.ಎಸ್.-ವಿಎಚ್‌ಪಿಗಳು ದೇಶದಲ್ಲಿನ ಜನರಲ್ಲಿ ಬಿತ್ತುತ್ತಿರುವ ಕೋಮುಭಾವನೆಗಳ ವಿಷಬೀಜವನ್ನು ಹಾಗೂ ಧರ್ಮದ ಹೆಸರಿನಲ್ಲಿ ಜನರ ಐಕ್ಯತೆಯನ್ನು ಒಡೆಯುವುದನ್ನು ಖಂಡಿಸುವ ನಿರ್ಣಯವನ್ನು ಸಮಾವೇಶವು ಸರ್ವಾನುಮತದಿಂದ ಅಂಗೀಕರಿಸಿತು.

ದಕ್ಷಿಣ ರೈಲ್ವೇ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ:ಅಯ್ಯಲು ಅವರು ಮಂಡಿಸಿದ ವರದಿಯ ಮೇಲೆ 22 ಜನರು ಚರ್ಚೆಯಲ್ಲಿ ಭಾಗವಹಿಸಿದರು. ರೈಲ್ವೆ ಕಾಂಟ್ರಾಕ್ಟ್ ಕ್ಯಾಂಟೀನ್ ಕಾಂಟ್ರಾಕ್ಟನ್ನು ರದ್ದುಪಡಿಸಿ ರೈಲ್ವೆ ಇಲಾಖೆಯು ನೇರವಾಗಿ ಕ್ಯಾಂಟೀನನ್ನು ನಡೆಸಬೇಕೆಂದು ಮತ್ತು ಪ್ರಯಾಣಿಕರಿಗೆ ಕಡಿಮೆ ಬೆಲೆಯಲ್ಲಿ ಹಾಗೂ ಶುಚಿಯಾಗಿರುವ ತಿಂಡಿ ತಿನಿಸುಗಳನ್ನು ಒದಗಿಸಬೇಕೆಂದು ಸಮಾವೇಶವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿತು. ಇದಕ್ಕಾಗಿ 1991 ಮಾರ್ಚ್ 1ರವರೆಗೆ ದಕ್ಷಿಣ ಭಾರತದಲ್ಲಿರುವ ಎಲ್ಲಾ ಕಾಂಟ್ರಾಕ್ಟ್ ಕ್ಯಾಂಟೀನ್ ನೌಕರರ ಸಹಿಸಂಗ್ರಹ ಚಳುವಳಿಯನ್ನು ಹಮ್ಮಿಕೊಂಡಿದ್ದು ನಂತರ ಮಾರ್ಚ್‌ಕೊನೆಯ ವಾರದಲ್ಲಿ ಮದ್ರಾಸ್‌ನಲ್ಲಿರುವ ದಕ್ಷಿಣ ಭಾರತ ರೈಲ್ವೆಯ ಜನರಲ್ ಮ್ಯಾನೇಜರ್‌ರವರ ಕಛೇರಿ ಮುಂದೆ ಬೃಹತ್ ರ್ಯಾಲಿ ಮುಖಾಂತರ ಸಂಗ್ರಹಿಸಿದ ಸಹಿಗಳುಳ್ಳ ಬೇಡಿಕೆಗಳ ಪಟ್ಟಿಯನ್ನು ಅರ್ಪಿಸಲು ಈ ಸಭೆಯು ತೀರ್ಮಾನಿಸಿದೆ.

ಸಧ್ಯಕ್ಕೆ ಇರುವ ಕಾಂಟ್ರಾಕ್ಟ್ ಪದ್ಧತಿಗಳಿಂದ ರೈಲ್ವೆ ಇಲಾಖೆಗೆ ಕೋಟ್ಯಾಂತರ ರೂಪಾಯಿಗಳ ನಷ್ಟ ಆಗುತ್ತಿದೆ ಎಂದು ಸಮಾವೇಶವು ಕೇಂದ್ರ ಸರಕಾರಕ್ಕೆ ತಿಳಿಯಪಡಿಸಿತು. ಮುಂದೆ ಇಲಾಖೆಯು ಇದರ ಬಗ್ಗೆ ಸರಿಯಾದ ನಿಲುವು ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ಸಮಾವೇಶವು ಸಂಸತ್ತಿನ ಮುಂದೆ ಧರಣಿ ಕೂಡುವ ಬಗ್ಗೆಯೂ ಯೋಚಿಸಲಿದೆ.

ಎ.ಡಿ.-ಆರ್.ಇ.ಯು.ವಿನ ಜಂಟಿ ಕಾರ್ಯದರ್ಶಿ ಶ್ರೀ ಇಳಂಗೋವನ್ ಅವರು ಮದ್ರಾಸ್ ವಿಭಾಗದ ರೈಲ್ವೆ ಯೂನಿಯನ್ ಕಾರ್ಯದರ್ಶಿ ರಾಜೇಂದ್ರನ್ ಮುಂತಾದವರು ಈ ಸಮಾವೇಶದಲ್ಲಿ ಮಾತನಾಡಿದರು.

ದಕ್ಷಿಣ ಭಾರತದ ರೈಲ್ವೆ ಕಾಂಟ್ರಾಕ್ಟ್ ಕ್ಯಾಂಟೀನ್ ಕಾರ್ಮಿಕರ ಹೋರಾಟ ಸಮಿತಿಯನ್ನು ರಚಿಸಲಾಯಿತು. ಇ.ಕೆ.ಎನ್.ರಾಜನ್ ಅವರನ್ನು ಸಂಚಾಲಕರನ್ನಾಗಿ ಸಮಾವೇಶವು ಸರ್ವಾನುಮತದಿಂದ ಆಯ್ಕೆ ಮಾಡಿತು.

ವಿ.ಪಳನಿ(ತಮಿಳುನಾಡು), ಅಚ್ಯುತನ್(ಕೇರಳ) ಇವರುಗಳು ಜಂಟಿ ಸಂಚಾಲಕರಾಗಿಯೂ, ಏಳು ಜನರು ಹೋರಾಟ ಸಮಿತಿಯಲ್ಲಿರುವರು.

ಬಿಇಎಫ್‌ಇನ ರೇವಣ್ಣ, ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಪಿ. ಜಗನ್ನಾಥ್, ಸಿಪಿಐ(ಎಂ) ನಾಯಕ ಪಿ.ಕೆ.ಸುಬ್ರಮಣಿ ಅವರು ಶುಭ ಹಾರೈಸಿ ಮಾತನಾಡಿದರು.

ಕೊನೆಯಲ್ಲಿ ಇ.ಕೆ.ಎನ್.-ರಾಜನ್ ಅವರು ಅತ್ಯಂತ ಯಶಸ್ವಿಯಾದ ಈ ಸಮಾವೇಶದ ವಂದನಾರ್ಪಣೆ ಮಾಡಿದರು.

ರೈತ ಕೃಷಿ ಕೂಲಿಗಾರರ ಬೆಂಗಳೂರು ಚಲೋ ಕಾಯಕ್ರಮ ಯಶಸ್ವಿಗೊಳಿಸಲು ನಿರ್ಧಾರ

ಕುಂದಾಪುರ ಡಿ.17: ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಎರಡು ಲಕ್ಷಕ್ಕೂ ಮಿಕ್ಕಿ ರೈತ ಕೃಷಿ ಕೂಲಿಗಾರರ ಪ್ರದರ್ಶನವನ್ನು ಕುಂದಾಪುರ ತಾಲೂಕು ರೈತ ಸಂಘದ ಪದಾಧಿಕಾರಿಗಳು ಸಭೆ ಸೇರಿ ಈ. ಕಾರ್ಯಕ್ರಮ ಯಶಸ್ವಿಗೊಳಿಸಲು ನಿರ್ಧರಿಸಲಾಯಿತು.

ರಾಜ್ಯ ಮಟ್ಟದ ಪ್ರದರ್ಶನಕ್ಕೆ ಪೂರ್ವಭಾವಿಯಾಗಿ ಜಿಲ್ಲಾವಾರು ಜೀಪ್, ಸೈಕಲ್ ಜಾತಾ ನಡೆಸಲಾಗುವುದು. ಇದರ ಅಂಗವಾಗಿ ಕುಂದಾಪುರ ತಾಲೂಕಿನಾದ್ಯಂತ 13 ಸಾರ್ವಜನಿಕ ಸಭೆ ಏರ್ಪಡಿಸಲಾಗಿದೆ. ಜನವರಿ 4ರಂದು ಮಂಗಳೂರಿನಿಂದ ಬೆಂಗಳೂರಿಗೆ ಹೊರಡುವ ಕಾಲ್ನಡಿಗೆ ಜಾತಾದಲ್ಲಿ ಭಾಗವಹಿಸಲು ಕುಂದಾಪುರದಿಂದ 15ಮಂದಿ ಚಳುವಳಿಗಾರರನ್ನು ಕಳುಹಿಸಲು ನಿರ್ಧರಿಸಲಾಯಿತು.

ರೈತರ ಬೆಳೆಗೆ ಪಂಪುಸೆಟ್ಟಿನಲ್ಲಿ ನೀರು ಹಾಯಿಸಲು ಅವಶ್ಯಕ ಚಿಮಣಿಎಣ್ಣೆ ಮತ್ತು ಡೀಸಲನ್ನು ಪರ್ಮಿಟ್ ಮೂಲಕ ವಿತರಣೆ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸಲಾಯಿತು, ಎಂದು ಕುಂದಾಪುರ ತಾಲೂಕು ರೈತ ಸಂಘದ ಅಧ್ಯಕ್ಷರಾದ ಕೆ.ಗೋವಿಂದ ಶೆಟ್ಟಿಗಾರ, ಕಾರ್ಯದರ್ಶಿ ಯು.ಆರ್.ಭಂಡಾರಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

“ಸಂಯುಕ್ತ ಹೋರಾಟ ಮಹತ್ವದ್ದು”

ಭದ್ರಾವತಿ.ಡಿ.14: ಕಾರ್ಮಿಕರು ಕಾರ್ಖಾನೆಯಲ್ಲಿ ಜಾತಿ, ಧರ್ಮ ತರದೆ ಐಕ್ಯತೆಯಿಂದ ಏನನ್ನಾದರೂ ಪಡೆಯಲು ಸಾಧ್ಯ. ಇದಕ್ಕೆ ಹಲವಾರು ಉದಾಹರಣೆಗಳಿವೆ ಎಂದು ಸಿಐಟಿಯು ರಾಜ್ಯ ಅಧ್ಯಕ್ಷ ಕಾಂ.ಎಸ್. ಸೂರ್ಯನಾರಾಯಣರಾವ್ ಅವರು ಭದ್ರಾವತಿಯಲ್ಲಿ ಮೈಸೂರು ಪೇಪರ್ ಮಿಲ್ಸ್‌ನ ಕಾರ್ಮಿಕರ ಬಹಿರಂಗ ಸಭೆಯಲ್ಲಿ ಹೇಳುತ್ತಾ ಕಾರ್ಮಿಕರ ಸಂಯುಕ್ತ ಹೋರಾಟದ ಮಹತ್ವವನ್ನು ವಿವರಿಸಿದರು. ಕಾರ್ಮಿಕರ ಸಂಯುಕ್ತ ಹೋರಾಟದ ಫಲವಾಗಿ ಈಗಾಗಲೇ ಒಪ್ಪಂದವಾಗಿರುವ ಪ್ರಕಾರ ಕಾರ್ಮಿಕರಿಗೆ ಸಿಗಬೇಕಾದ ಬಾಕಿ ಹಣವನ್ನು ಹೊಸ ವರ್ಷದ ಮೊದಲ ವಾರದಲ್ಲೇ ನೀಡಬೇಕು, ಇಬ್ಬರು ಪದಾಧಿಕಾರಿಗಳನ್ನು ತಕ್ಷಣ ಕೆಲಸಕ್ಕೆ ತೆಗೆದುಕೊಳ್ಳಬೇಕು, ಇಲ್ಲವಾದರೆ ಎರಡನೇ ಹಂತದ ಹೋರಾಟ ಅನಿವಾರ್ಯವಾಗುತ್ತದೆ ಎಂದು ಅವರು ಮ್ಯಾನೇಜ್‌ಮೆಂಟನ್ನು ಎಚ್ಚರಿಸಿದರು.

ವಿ.ಐ.ಎಸ್.-ಎಲ್.ಕಾರ್ಮಿಕರನ್ನುದ್ದೇಶಿಸಿ ಕಾಂ:ಸೂರಿಯವರು ಮಾತನಾಡುತ್ತಾ ಇಲ್ಲಿಯೂ ಸಂಯುಕ್ತ ಹೋರಾಟ ಅಗತ್ಯವಾಗಿದ್ದು ಜನವರಿಯಲ್ಲಿ ಭಾರತ ಉಕ್ಕು ಒಕ್ಕೂಟ(ಎಸ್.ಡಬ್ಲ್ಯು.-ಎಫ್.ಐ.)ಒಂದು ಕಾರ್ಯಕ್ರಮ ರೂಪಿಸಲಿದೆಯೆಂದು ತಿಳಿಸಿದರು.

ಮುಖ್ಯಮಂತ್ರಿಗಳಿಗೆ ಮಹಿಳೆಯರ ಮನವಿ

ಗುಲ್ಬರ್ಗಾ ನಗರದಲ್ಲಿರುವ ಗಂಗಾನಗರ 1975ರಲ್ಲಿ ಜನ್ಮ ತಾಳಿ ಇಂದಿನವರೆಗೂ ಕೊಳಚೆ ಪ್ರದೇಶವಾಗಿ ಇಡೀ ಕೊಳೆತು ನಾರುತ್ತಿರುವ ‘ಗಂಗೆ’ ಯಿಂದ ಅನ್ವರ್ಥವಾಗಿ ‘ಸಾರ್ಥಕ’ವಾಗಿರುವ ಹೆಸರು. ಆದರೂ ಇನ್ನೂ ಕೊಳಚೆ ಪ್ರದೇಶವೆಂದು ಘೋಷಿತವಾಗಿಲ್ಲ. ನಾಗರೀಕ ಸೌಲಭ್ಯಗಳ ಸುಳಿವೇ ಇಲ್ಲ. ಜನವಾದಿ ಮಹಿಳಾ ಸಂಘಟನೆಯ ಸ್ಥಳೀಯ ಘಟಕ ಈಗ ನಾಗರೀಕ ಸೌಲಭ್ಯಗಳನ್ನು ಪಡೆಯಲು ಹೋರಾಟ ಆರಂಭಿಸಿದೆ. ಡಿಸೆಂಬರ್ 10 ರಂದು ಮುಖ್ಯಮಂತ್ರಿಗಳಿಗೆ ಗುಲ್ಬರ್ಗಾನಗರಕ್ಕೆ ಭೇಟಿ ಕೊಟ್ಟಾಗ ಈ ಬಗ್ಗೆ ಒಂದು ಮನವಿ ಪತ್ರ ಸಲ್ಲಿಸಲಾಗಿದೆ. ಕೊಳಚೆ ಪ್ರದೇಶವೆಂದು ಘೋಷಿಸಿ ಮನೆ ಕಟ್ಟಿಕೊಳ್ಳಲು ಸಹಾಯಧನ, ಮಹಿಳೆಯರಿಗಾಗಿ ಶೌಚಾಲಯಗಳು, ನೀರು ಪೂರೈಕೆ, ರಸ್ತೆ, ಸಿಟಿ ಬಸ್ ವ್ಯವಸ್ಥೆ, ಪ್ರಾಥಮಿಕ ಶಾಲೆ ಇತ್ಯಾದಿ ಬೇಡಿಕೆಗಳನ್ನು ಈ ಮನವಿಯಲ್ಲಿ ಮುಖ್ಯಮಂತ್ರಿಗಳ ಮುಂದೆ ಇಡಲಾಗಿದೆ.

ಪ್ರತಿಗಾಮಿ ಕೋಮುವಾದಿ ರಾಜಕೀಯಕ್ಕೆ ಸವಾಲೊಡ್ಡಲಿರುವ ರೈತರ ಕಾಲು ಜಾಥಾ

**ಈ ಸಂಚಿಕೆ ನಿಮ್ಮ ಕೈಸೇರುವ ಹೊತ್ತಿಗಾಗಲೇ
ಬೀದರ್ ಹಾಗೂ ಬಿಜಾಪುರದಿಂದ ಹೊರಟಿರುವ
ಜನವರಿ 6ರಂದು ಮಂಗಳೂರಿನಿಂದ ಹೊರಡಲಿರುವ
ಜಾತಾಗಳೆಲ್ಲಾ ಬೆಂಗಳೂರನ್ನು
ಜನವರಿ 21ರಂದು ಸುಂಟರಗಾಳಿಯಾಗಿ ಪ್ರವೇಶಿಸಲಿವೆ.
ಕರ್ನಾಟಕ ಪ್ರಾಂತ ರೈತ ಸಂಘ
ಹಾಗೂ
ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘ
ಜಂಟಿಯಾಗಿ ನೀಡಿರುವ ಈ ಕರೆಯ
ಹಿನ್ನೆಲೆಯನ್ನು ವಿವರಿಸುತ್ತಾರೆ
ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ
ಕಾಂ: ಚಂದ್ರಶೇಖರ್ ಬಾಳೆ.**

ಚಂದ್ರಶೇಖರ ಬಾಳೆ

ಮಹಾನ್ ಕ್ರಾಂತಿಕಾರಿ ಕಾ: ಮಾವೋತ್ಸೆ ತುಂಗರು ನಡೆಸಿದ ಚೈನಾದ ದುಡಿಯುವ ಜನತೆಯ ಲಾಂಗ್ ಮಾರ್ಚ್, ಇಂದಿಗೂ ಜಗತ್ತಿನ ದುಡಿಯುವ ಜನರ ಹೋರಾಟದ ಸ್ಫೂರ್ತಿಯಾಗಿದೆ.

ನೂರಾರು ಜಾಥಾಗಳನ್ನು ಕೇರಳದ ಮೂಲೆ ಮೂಲೆಗಳಿಂದ ನಡೆಸಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಜನತೆಯನ್ನು ಹೋರಾಟಕ್ಕಿಳಿಸಿ ರಾಷ್ಟ್ರೀಯ ಸ್ವಾತಂತ್ರ್ಯ ಬಾವುಟ ಹಾರಿಸುವ ದಿನವೇ ಜೈಲಿನಲ್ಲಿದ್ದ ಎ.ಕೆ.ಗೋಪಾಲನ್‌ರವರು ಬ್ರಿಟಿಷ್‌ರನ್ನು ಮೀರಿಸುವ ಗುತ್ತೇದಾರಿ ಬಂಡವಾಳಶಾಹಿ ಭೂ ಮಾಲೀಕ ಕಾಂಗ್ರೆಸಿನ ಧೋರಣೆಯನ್ನು ಜನರಿಗೆ ತಿಳಿಸಿ ಕಾಂಗ್ರೆಸಿನ ಹಾಗೂ ಬಂಡವಾಳಶಾಹಿ ರಾಜಕೀಯದಿಂದ ಜನತೆ ಹೊರಬರುವಂತೆ ಮಾಡಲು ಸಾವಿರಾರು ಜಾತಾಗಳನ್ನು ನಡೆಸಿ ಎಡ ಮತ್ತು ಪ್ರಜಾಪ್ರಭುತ್ವ ಸರ್ಕಾರವನ್ನು ಸಿಪಿಐ(ಎಂ) ಮುಂದಾಳತ್ವದಲ್ಲಿ ರಚಿಸಲು ಸಾಧ್ಯಮಾಡಿಕೊಟ್ಟರು ಎಂಬುದನ್ನು ಚರಿತ್ರೆ ಕೂಗಿ ಕೂಗಿ ಹೇಳುತ್ತಿದೆ.

ಹಾಗೆಯೇ 1985ರಲ್ಲಿ ಇಂದಿರಾಗಾಂಧಿಯವರ ಸಾವಿನ ಅನುಕಂಪದ ಮತ ಪಡೆದ ರಾಜೀವ್‌ಗಾಂಧಿಯ ಸರಕಾರ ತಾಳಿದ ಸರ್ವಾಧಿಕಾರಿ ಧೋರಣೆಯಿಂದಾಗಿ, ವಿಚ್ಛಿದ್ರಕಾರಿಗಳು, ಕೋಮುವಾದಿಗಳು ರಾಷ್ಟ್ರದ ಐಕ್ಯತೆ, ಸಮಗ್ರತೆಗೆ ಸವಾಲೊಡ್ಡಿದಾಗ ಸಿಪಿಐ(ಎಂ) ಕೇಂದ್ರ ಸಮಿತಿ ರಾಜೀವ್‌ಗಾಂಧಿ ಸರಕಾರ ಕೇಂದ್ರದಲ್ಲಿ ಮುಂದುವರಿಯುವುದು ರಾಷ್ಟ್ರದ ಸಮಗ್ರತೆಗೆ ಗಂಡಾಂತಕರವೆಂದು ಸಾರಿ, ಎಡ ಪಕ್ಷಗಳು ಬೆಂಬಲಿಸುವ ಸಮೂಹ ಹಾಗೂ ವರ್ಗ ಸಂಘಟನೆಗಳಿಗೆ ಆಯಾ ಜನತೆ ಬಾಧಿಸುವ ಸಮಸ್ಯೆಗಳನ್ನು ಈಡೇರಿಸಲು ರಾಜೀವ್ ಗಾಂಧಿ ಸರಕಾರ ಮುಂದಾಗಬೇಕು ಇಲ್ಲವೆ ರಾಜೀನಾಮೆ ಕೊಡಬೇಕೆಂದು ಕರೆ ಕೊಟ್ಟಿತು.

ಈ ರಾಜಕೀಯ ಮಂತ್ರವನ್ನು ರಾಷ್ಟ್ರದ ಉದ್ದಗಲಕ್ಕೂ ಜನತೆಯತ್ತ ಒಯ್ದು ಡಿಸೆಂಬರ್ 9, 1987 ರಂದು ನವದೆಹಲಿಯಲ್ಲಿ ಮಿಲಿಯಗಟ್ಟಲೆ ದುಡಿಯುವ ಜನತೆಯನ್ನು ಅಣಿನೆರೆಸಲು ಕರೆಕೊಟ್ಟಿತು. ಅದಕ್ಕಾಗಿ ಬಳಸಿದ ಆಯುಧವು ಜಾಥಾವಾಗಿತ್ತು. ರಾಷ್ಟ್ರದ ಮೂಲೆಮೂಲೆಗಳಿಂದ ಕನ್ಯಾಕುಮಾರಿಯಿಂದ ಕಾಶ್ಮೀರದಿಂದಲೂ ಜಾತಾಗಳು ಹೊರಟರೆ, ಈ ಜಾತಾಗಳಿಗೆ ಪೂರಕವಾಗಿ ರಾಜ್ಯವ್ಯಾಪಿ ಜಾತಾಗಳು ನಡೆದವು. ಕರ್ನಾಟಕದಲ್ಲೂ ರಾಜ್ಯದ ಮೂಲೆಮೂಲೆಗಳಿಂದ ಜೀಪ್ ಜಾತಾ ನಡೆಸಲಾಯಿತು.

1987 ಡಿಸೆಂಬರ್ 9 ರ ಎರಡು ಮಿಲಿಯ ಜನರ ರ‍್ಯಾಲಿಗೆ ನವದೆಹಲಿ ನಡುಗಿತು. ರಾಜೀವ್ ಗಾಂಧಿಯ ಸಿಂಹಾಸನ ತತ್ತರಿಸಿಹೋಯಿತು. ಆಗ ರಾಷ್ಟ್ರದ ಪ್ರಜಾಸತ್ತಾತ್ಮಕ ಪಕ್ಷಗಳೆಲ್ಲಾ ಎಡ ಪಕ್ಷಗಳ ಕರೆಗೆ ಓಗೊಡುವಂತಾಯಿತು.

ಅಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಸೋತು ರಾಷ್ಟ್ರೀಯ ರಂಗ ಆಡಳಿತಕ್ಕೆ ಬಂದಿತು. ಸರ್ವಾಧಿಕಾರಿ ಕಾಂಗ್ರೆಸ್ಸನ್ನು ಸೋಲಿಸುವುದರ ಜೊತೆಗೆ ಕೋಮುವಾದಿಗಳನ್ನು ಜನರಿಂದ ಬೇರ್ಪಡಿಸಲು ಎಡ ಪಕ್ಷಗಳು ಕರೆ ಕೊಟ್ಟವು. ಅದನ್ನು ಒಪ್ಪದ ರಾಷ್ಟ್ರೀಯ ರಂಗ ಸರಕಾರ ಕೋಮುವಾದಿ ಸವಾಲಿಗೆ ಆಡಳಿತವನ್ನೇ ಕಳೆದುಕೊಳ್ಳಬೇಕಾಯಿತು. ತತ್ವ ರಹಿತ ರಾಜಕಾರಣಿಗಳು ಕಾಂಗ್ರೆಸ್ಸಿನ ಕುತ್ತೂರಿಯಾಗಿ ಆಡಳಿತ ಯಂತ್ರ ಹಿಡಿಯುವಂತಾಗಿದೆ. ದೇಶ ವಿಚ್ಛಿದ್ರಕಾರಿ, ಕೋಮುವಾದಿಗಳಿಂದ ನಡುಗುತ್ತಿದೆ. ಬೆಲೆಯೇರಿಕೆ ಸೇರಿದಂತೆ ಮೂಲಭೂತ ಸಮಸ್ಯೆಗಳಿಂದ ಜನ ಆಘಾತಕ್ಕೀಡಾಗುತ್ತಿದ್ದಾರೆ.

ಸಿಪಿಐ(ಎಂ) ಕೇಂದ್ರ ಸಮಿತಿಯ ಅಂದಿನ ಕರೆ ರಾಷ್ಟ್ರದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳು ಕಾರ್ಯಕ್ರಮ ಆಧಾರಿತ ಹೋರಾಟದೊಂದಿಗೆ ರಾಷ್ಟ್ರದ ಮುಂದಿರುವ ಸವಾಲಿಗೆ ಉತ್ತರಿಸಬೇಕೆಂದು ಕರೆ ಕೊಟ್ಟಿದ್ದು ದಿಟವಾಗುತ್ತಿದೆ. ವಿ.ಪಿ.ಸಿಂಗ್ ನಾಯಕತ್ವದ ಜನತಾದಳ ಈ ಕುರಿತು ಇಂದು ಒಂದೊಂದು ಹೆಜ್ಜೆ ಇಡಲು ಪ್ರಯತ್ನಿಸುತ್ತಿದೆ.


ಸಿಪಿಐ(ಎಂ) ಕೇಂದ್ರ ಸಮಿತಿ ಇಂದಿನ ರಾಜಕೀಯ ಬಿಕ್ಕಟ್ಟಿನಲ್ಲಿ, ರಾಷ್ಟ್ರೀಯ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮತ್ತೊಂದು ಘೋಷಣೆ ಕೊಟ್ಟಿದೆ. ಅದನ್ನು ಜಾರಿಗೊಳಿಸುವುದೇ ಇಂದಿನ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ, ಜಾತ್ಯಾತೀತ ಜನತೆಯ ಹಾಗೂ ಸಂಘಟನೆಗಳ ಕರ್ತವ್ಯವಾಗಿದೆ, ಏಕ ಮಾತ್ರ ವೈಜ್ಞಾನಿಕ ದಾರಿಯಾಗಿದೆ ಕೂಡ.

ಆ ಕರೆ ಇದಾಗಿದೆ–ಸ್ವಾತಂತ್ರ್ಯಾನಂತರ ದೇಶ ಹಿಂದೆಂದೂ ಇಲ್ಲದಷ್ಟು ಕೋಮು ಗಲಭೆಗೆ ವಿಚ್ಛಿದ್ರಕಾರಿಗಳ ಚಟುವಟಿಕೆಗಳಿಗೆ ಬಲಿಯಾಗುತ್ತಿದ್ದು, ಈ ಸವಾಲನ್ನು ಎದುರಿಸಲು ತಯಾರಾದ ವಿ.ಪಿ.ಸಿಂಗ್‌ರ ರಾಷ್ಟ್ರೀಯ ರಂಗ ಸರಕಾರ ಅದಕ್ಕೆ ನೈತಿಕ, ದೈಹಿಕ ಬೆಂಬಲವಾಗಿ ನಿಂತ ಎಡ ಪಕ್ಷಗಳನ್ನು ಸೋಲಿಸಿ, ಬಿಜೆಪಿ ಕೋಮುವಾದಿಗಳು ಸಂದರ್ಭಸಾಧಕ, ಸರ್ವಾಧಿಕಾರಿ ಕಾಂಗ್ರೆಸ್ ಹಾಗೂ ತತ್ವ ರಹಿತ ರಾಜಕೀಯ ಮುಖಂಡತ್ವದ ಜನತಾದಳ(ಎಸ್) ಸೇರಿ ರಾಷ್ಟ್ರವನ್ನು ಗಂಡಾಂತರಕ್ಕೆ ತಳ್ಳುತ್ತಿದೆ.

ಈ ಶಕ್ತಿಗಳನ್ನು ಸೋಲಿಸಲು ರಾಷ್ಟ್ರದ ಸಮಗ್ರತೆ, ಕೋಮುಸೌಹಾರ್ದತೆಯನ್ನು ಕಾಪಾಡಿ ರಾಷ್ಟ್ರವನ್ನು ಮುಂದೆ ಕೊಂಡೊಯ್ಯಲು ಜನರ ಸಮಸ್ಯೆಗಳಿಗೆ ಪರಿಹಾರ ಪಡೆಯುವಂತಾಗಲು, ದೇಶದ ದುಡಿಯುವ ಜನತೆ, ಎಡ ಮತ್ತು ಜಾತ್ಯಾತೀತ ಶಕ್ತಿಗಳ ಕೈ ಬಲಪಡಿಸಬೇಕು. ಅದಕ್ಕಾಗಿ ಜನ ಸಮೂಹ ಎದುರಿಸುವ ಸಮಸ್ಯೆಗಳಿಗಾಗಿ ಆಯಾ ಜನ ಸಮೂಹ ಸಂಘಟನೆಗಳು ತೀವ್ರತರವಾದ, ವ್ಯಾಪಕವಾದ, ಐಕ್ಯತೆಯಿಂದ ಕೂಡಿದ ಬೃಹತ್ ಚಟುವಟಿಕೆಗಳನ್ನು ರೂಪಿಸಬೇಕು. ,ಆ ಮುಖಾಂತರ ಜನತೆ ಸಮಸ್ಯೆಗಳಿಗಾಗಿ ಜಾತಿ, ಧರ್ಮ, ಕೋಮುಗಳನ್ನು ಮೀರಿದ ಐಕ್ಯತೆಯನ್ನು ಸಾಧಿಸಲು ಕೋಮುವಾದಿ ವಿಚ್ಛಿದ್ರಕಾರಿ ಶಕ್ತಿಗಳನ್ನು ಜನರಿಂದ ಬೇರ್ಪಡಿಸಲು, ಜನರನ್ನು ಸಮಸ್ಯೆಗಳಿಂದ ವಿಮುಕ್ತಗೊಳಿಸಿ ರಾಜಕೀಯ ಲಾಭ ಪಡೆಯುವ ಶಕ್ತಿಗಳನ್ನು ಸೋಲಿಸಲು ಎಡ ಮತ್ತು ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳನ್ನು ರಾಷ್ಟ್ರದಲ್ಲಿ ಬಲಗೊಳಿಸಲು ಸಾಧ್ಯವೆಂದು ಕರೆ ಕೊಟ್ಟಿದೆ.

ಈ ಹಿನ್ನೆಲೆಯಲ್ಲಿಯೇ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘದ ರಾಜ್ಯ ಸಮಿತಿಗಳು ಜಂಟಿಯಾಗಿ ರೈತ-ಕೂಲಿಗಾರರನ್ನು ಬಾಧಿಸುವ ಹನ್ನೆರಡು ಬೇಡಿಕೆಗಳಿಗಾಗಿ, ಭೂಮಿ, ಸಾಲ, ಕೂಲಿ, ನೀರಾವರಿ, ವಸತಿ, ವಿದ್ಯುತ್ [illegible] ಏರಿಕೆ, ಅಗತ್ಯವಸ್ತುಗಳು, ಬರಪರಿಹಾರ, ಬೆಳೆ ವಿಮೆ, ಬೀಜ, ಗೊಬ್ಬರ, ಕ್ರಿಮಿನಾಶಕದಂತಹ ಬೇಡಿಕೆಗಳನ್ನಿಟ್ಟು, ರಾಜ್ಯದ ರೈತರನ್ನು ಪ್ರಗತಿಪರ ರಾಜಕೀಯದತ್ತ ಮುನ್ನುಗ್ಗಲು, ರೈತ ವಿರೋಧಿ, ಜನವಿರೋಧಿಸಂಘಟನೆಗಳನ್ನು ರಾಜಕೀಯವನ್ನು ಅರಿಯುವಂತೆ ಮಾಡಲು ಮತ್ತೊಮ್ಮೆ ರಾಜ್ಯ ವ್ಯಾಪಿಯಾಗಿ ರೈತರ ಕಾಲು ಜಾತಾಕ್ಕೆ ಕರೆ ಕೊಡಲಾಗಿದೆ.

ಹನ್ನೆರಡು ಬೇಡಿಕೆಗಳ ಪ್ರಚಾರದೊಂದಿಗೆ ಕೋಮುವಾದಿಗಳನ್ನು, ಸರ್ವಾಧಿಕಾರಿಗಳನ್ನು ಬಯಲಿಗೆಳೆಯುವತ್ತ ತಂಗಾಳಿಯಂತೆ ಡಿಸೆಂಬರ್ 19ರಂದು ಬೀದರಿನಿಂದ, 28ರಂದು ಬಿಜಾಪುರದಿಂದ, ಜನವರಿ6ರಂದು ಮಂಗಳೂರಿನಿಂದ ಹೊರಡುವ ರೈತರ ಕಾ[illegible]ಗಳು ಸುಂಟರಗಾಳಿಯಾಗಿ ಜನವರಿ 21ರಂದು ಬೆಂಗಳೂರಿನಲ್ಲಿ ಬೀಸಲಿವೆ. ಪ್ರತಿಗಾಮಿ, ಕೋಮುವಾದಿ, ರಾಜಕೀಯಕ್ಕೆ ಸವಾಲೊಡ್ಡಲಿವೆ.



ಬೀದರ್‌ನಿಂದ ಬೆಂಗಳೂರಿನತ್ತ ರೈತರ ಕೃಷಿ ಕೂಲಿಗಾರರ ಜಾಥಾ ಕಾರ್ಯಕ್ರಮ

ಬೀದರ್‌ನಿಂದ

19.12.90-ಬೀದರ್ ಪಾದಯಾತ್ರೆ ಉದ್ಘಾಟನೆ
20.12.90-ಹಳ್ಳಿಖೇಡ್
19.12.90-ಬೀದರ್ ಪಾದಯಾತ್ರೆ ಉದ್ಘಾಟನೆ
20.12.90-ಹಳ್ಳಿಖೇಡ್
21.1290ಹುಮನಾಬಾದ್
22.12.90ಡೊಂಗರಗಾಂವ್
23.12.90ಔರಾದ್
24.12.90ಗುಲ್ಬರ್ಗಾ
25.12.90ಸರಡಗಿ
26.12.90ಜೇವರ್ಗಿ
27.12.90ಮದ್ರಿಕಿ
28.12.90ಶಹಾಪುರ
29.12.90
30.12.90ದೇವದುರ್ಗ
31.12.90ಗಬ್ಬೂರ
1.1.91ರಾಯಚೂರು
2.1.91ಕುರ್ಡಿ
3.1.91ಮಾನ್ವಿ
4.1.91ಪೋತ್ನಾಳ್
5.1.91ಸಿಂಧನೂರು
6.1.91ಸಿರುಗುಪ್ಪಾ(ಬಳ್ಳಾರಿ ಜಿಲ್ಲೆ)
7.1.91ಸಿರುಗುಪ್ಪಾ(ತಾಲೂಕ)
8.1.91ಬಳ್ಳಾರಿ
9.1.91ರಾಂಪುರ
10.1.9ಹಾನಗಲ್
11.1.91ಹಿರೇಹಳ್ಳಿ
12.1.91ಚಳ್ಳಕೆರೆ
13.1.91ಚಳ್ಳಕೆರೆ ತಾಲೂಕ
14.1.91ಹಿರಿಯೂರು
15.1.91ಶಿರಾ(ತುಮಕೂರು ಜಿಲ್ಲೆ)
16.1.91ಸಿ.ಬಿ.ಗುಡಿ
17.1.91ತುಮಕೂರು
18.1.91ಕ್ಯಾತಸಂದ್ರ
19.1.91ಬಿಲ್ಲನಕೋಟೆ
20.1.91ಬೆಂಗಳೂರು ಗಡಿ

ಬಿಜಾಪುರದಿಂದ

ಡಿಸೆಂಬರ್-28-ಬಿಜಾಪುರ ಪಾದಯಾತ್ರೆ ಉದ್ಘಾಟನೆ
ಡಿಸೆಂಬರ್-29-ಮನಗೋಳಿ
ಡಿಸೆಂಬರ್-30-ಬಸವನಬಾಗೇವಾಡಿ
ಡಿಸೆಂಬರ್-31-ಆಲಮಟ್ಟಿ
1991-ಜನವರಿ-1-ಹುನಗುಂದ
1991-ಜನವರಿ-2-ಇಲಕಲ್
1991-ಜನವರಿ-3-ಕುಷ್ಟಗಿ
1991-ಜನವರಿ-4-ಯಲಬುರ್ಗಾ
1991-ಜನವರಿ-5-ಕೊಪ್ಪಳ
1991-ಜನವರಿ-6-ತಂಬರಹಳ್ಳಿ
1991-ಜನವರಿ-7-ಹಗರಿಬೊಮ್ಮನಹಳ್ಳಿ
1991-ಜನವರಿ-8-ಹಸ್ಪಿ
1991-ಜನವರಿ-9-ಅಮ್ಮನಕೇರಿ
1991-ಜನವರಿ-10-ಹಾನಗಲ್
(ಬೀದರ್ ಜಾತಾಕ್ಕೆ ಸೇರುತ್ತದೆ)

ಮಂಗಳೂರಿನಿಂದ

1991-ಜನವರಿ-6-ದಕ್ಷಿಣ ಕನ್ನಡ ಜಿಲ್ಲಾ ಪಾದಯಾತ್ರೆ ಉದ್ಘಾಟನೆ
1991-ಜನವರಿ-7-ಉಪ್ಪಿನಂಗಡಿ
1991-ಜನವರಿ-8-ಉದನೆ
1991-ಜನವರಿ-9-ಕಾಡುಮನೆ
1991-ಜನವರಿ-10-ಸಕಲೇಶಪುರ
1991-ಜನವರಿ-11-ಆಲೂರ್
1991-ಜನವರಿ-12-ಹಾಸನ
1991-ಜನವರಿ-13-ಗಂಡಸಿ
1991-ಜನವರಿ-14-ತಿಪಟೂರು
1991-ಜನವರಿ-15-ಅರೇನಹಳ್ಳಿ
1991-ಜನವರಿ-16-ಗುಬ್ಬಿ
1991-ಜನವರಿ-17-ತುಮಕೂರು

ಬೀದರ್ ಹಾಗೂ ಬಿಜಾಪುರದಿಂದ ಹೊರಟ ಜಾತಾಗಳೊಂದಿಗೆ ಸೇರುತ್ತದೆ.

ರೈತ-ಕೂಲಿಗಾರರ ಮಹಾಜಾತಾವನ್ನು ಬೆಂಗಳೂರು ಮಹಾ ನಗರಕ್ಕೆ ಸ್ವಾಗತಿಸಲು ನಗರದ ಕಾರ್ಮಿಕ ವರ್ಗದಿಂದ ಸ್ವಾಗತ ಸಮಿತಿ


ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಗಾರರ ಸಂಘ, ಬೆಂಗಳೂರು ಜಿಲ್ಲಾ ಸಮಿತಿಗಳ ಕರೆಯ ಮೇರೆಗೆ, ಸಿಪಿಐ(ಎಂ) ಜಿಲ್ಲಾ ಮುಖಂಡರು,(ಸಿಐಟಿಯು, ಪ್ರಜಾಸತ್ತಾತ್ಮಕ ಯುವಜನ ಸಂಘಟನೆ, ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ) ಹಾಗೂ ಎಲ್ಲಾ ಸಾಮೂಹಿಕ ಸಂಘಟನೆಗಳ ಮುಖಂಡರು ಪಾಲುಗೊಂಡಿದ್ದರು. ಕಾಂ: ಎಸ್.ರೇವಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಕಾಂ: ಚಂದ್ರಶೇಖರ್‌ಬಾಳೆ ಜನವರಿ 21-1991ರಂದು ನಡೆಯಲಿರುವ ರೈತ--ಕೃಷಿ ಕೂಲಿಗಾರರ ಮಹಾ ಪ್ರದರ್ಶನಕ್ಕೆ ತಯಾರಿಯಾಗಿ ರಾಜ್ಯದ ಮೂಲೆಮೂಲೆಗಳಿಂದ ರೈತರ ಕಾಲು ಜಾತಾಗಳು ಅದಕ್ಕೆ ತಯಾರಿಯಾಗಿ ಜೀಪ್ ಜಾತಾ, ಟ್ರ್ಯಾಕ್ಟರ್ ಜಾತಾಗಳನ್ನು ನಡೆಸಿ ರೈತರ ಹನ್ನೆರಡು ಬೇಡಿಕೆಗಳಿಗಾಗಿ ಕೋಮು ಸೌಹಾರ್ದತೆಗಾಗಿ ನಡೆಯುವ ಚಾರಿತ್ರಿಕ ಚಳುವಳಿಯ ಕುರಿತು ವಿವರಿಸಿ ಅದಕ್ಕೆ ಬೆಂಗಳೂರು ನಗರದಲ್ಲಿ ಎಲ್ಲಾ ರೀತಿಯ ಸಹಕಾರವನ್ನು ನೀಡಲು ಮನವಿ ಮಾಡಿದರು.

ರೈತರ ಈ ಚಾರಿತ್ರಿಕ ಕಾರ್ಯಕ್ರಮವನ್ನು ಸ್ವಾಗತಿಸಿ ತಮ್ಮೆಲ್ಲಾ ಬೆಂಬಲವನ್ನು ನೀಡುವುದಾಗಿ ಈ ಚಳುವಳಿ ರೈತ-ಕಾರ್ಮಿಕರ ಸಖ್ಯತೆಯ ಸಂಕೇತವಾಗುವಂತೆ ಯಶಸ್ವಿ ಮಾಡುವುದಾಗಿ ಈ ಸಂಗಾತಿಗಳು ಮಾತನಾಡಿ ಘೋಷಿಸಿದರು.

ಕಾಂ: ಪಿ.ಜಗನ್ನಾಥ್, ಪ್ರಾಂತ ರೈತ ಸಂಘ, ಪ್ರಾಂತ ಕೃಷಿ ಕೂಲಿಗಾರರ ಸಂಘ, ಬೆಂಗಳೂರು ಜಿಲ್ಲಾ ಸಮಿತಿಯ ಪರವಾಗಿ, ಕಾಂ: ಕೆ.ಎಸ್.ಸುಬ್ರಮಣ್ಯ, ಸಿಐಟಿಯು ಬೆಂಗಳೂರು ಜಿಲ್ಲಾ ಕಾರ್ಯದರ್ಶಿ, ಕಾಂ: ನಾಗಮೋಹನ್ ದಾಸ್ ಅಧ್ಯಕ್ಷರು ಡಿವೈಎಫ್ಐ ರಾಜ್ಯಸಮಿತಿ, ಕಾಂ. ರಾಜಮ್ಮ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ರಾಜ್ಯ ಸಮಿತಿ ಉಪಾಧ್ಯಕ್ಷರು, ಕಾಂ: ಟಿ.ಎಸ್.ಅನಂತರಾಮು, ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿ ಉಪಾಧ್ಯಕ್ಷರು, ಕಾಂ: ಅಬ್ರಹಾಂ ಐಟಿಐ ಕಾರ್ಮಿಕ ಮುಖಂಡರು, ಕಾಂ.ಶಿವಶಂಕರ್, ಮೈಕೋ ಕಾರ್ಮಿಕರ ಯೂನಿಯನ್ ಮುಖಂಡರು, ಕಾಂ. ಬಾಲಕೃಷ್ಣ-ಬಿಇಎಫ್ಐ ಮುಖಂಡರು, ಕಾಂ.ಗಂಜರಾಜು-ಎಡಿಯಾ ಕಾರ್ಮಿಕ ಮುಖಂಡರು, ಕಾಂ.ರಘು-ಆಟೋ ಡ್ರೈವರ್ಸ್ ಯೂನಿಯನ್, ಕಾಂ. ಎಸ್. ಸೂರ್ಯನಾರಾಯಣ ರಾವ್ ಸಿಐಟಿಯು ರಾಜ್ಯ ಅಧ್ಯಕ್ಷರು, ಕಾಂ. ವಿ. ರಾಮಚಂದ್ರರಾವ್ ಕಾರ್ಯದರ್ಶಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ. ಕೊನೆಯಲ್ಲಿ ಕಾಂ. ಆರ್.ಶ್ರೀನಿವಾಸ್ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿಗಳು ಸಭೆಯಲ್ಲಿ ಮುಕ್ತಾಯ ಮಾಡುತ್ತಾ ಈ ಚಾರಿತ್ರಿಕ ಕಾರ್ಯಕ್ರಮವನ್ನು ಎಲ್ಲಾ ರೀತಿಯಲ್ಲಿ ಯಶಸ್ವಿಗೊಳಿಸಲು ಒಂದು ಸವಾಲಾಗಿ [illegible] ಕರೆ ನೀಡಿದರು.

ಕ್ಯೂಬಾ ಕ್ರಾಂತಿ 1959 ಕ್ಯೂಬಾ ಕ್ರಾಂತಿ 1959 ಕ್ಯೂಬಾ ಕ್ರಾಂತಿ 1959 ಕ್ಯೂಬಾ ಕ್ರಾಂತಿ 1959 ಕ್ಯೂಬಾ ಕ್ರಾಂತಿ





ನಮಗೆ ಶಾಂತಿ ಬೇಕು
ಆದರೆ ಅದು ವಿಶ್ವದ ಎಲ್ಲಾ ಜನಗಳಿಗೆ ಶಾಂತಿ
ವಿಶ್ವದ ಜನಗಳಿಗೆ ಹಕ್ಕುಗಳೊಂದಿಗೆ ಶಾಂತಿ!
ಗೌರವದೊಂದಿಗೆ ಶಾಂತಿ!
ಸ್ವಾತಂತ್ರ್ಯದೊಂದಿಗೆ, ಭದ್ರತೆಯೊಂದಿಗೆ ಶಾಂತಿ!
ನಾವು ಇಂತಹ ಶಾಂತಿ ಬಯಸಬೇಕು.

(ಕ್ಯೂಬಾ ಕ್ರಾಂತಿಯ 30ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಫಿದೆಲ್ ಕ್ಯಾಸ್ಟ್ರೋ)

ಜನವರಿ

1-ಕ್ಯೂಬಾ ಕ್ರಾಂತಿ(1959)
2-ಮುಂಬೈ ಕಾರ್ಮಿಕರ ಮೊದಲ ಸಾರ್ವತ್ರಿಕ ಮುಷ್ಕರ(1919)
8-ಚೌ-ಎನ್-ಲೈ ನಿಧನ(1976)
10-ಕಾಂ:ಸರೋಜ್ ಮುಖರ್ಜೀ ನಿಧನ(1990)
11-ಎ.ಐ.ಕೆ.ಎಸ್.ಸ್ಥಾಪನೆ(1936)
21-ಲೆನಿನ್ ನಿಧನ (1924)
26-ಭಾರತ ಗಣರಾಜ್ಯ(1950)
30-ಕೋಮುವಾದಿಗಳಿಂದ ಗಾಂಧೀಜಿ ಹತ್ಯೆ (1948)

ಫೆಬ್ರವರಿ

18-ರಿನ್ ನಾವಿಕರ ಬಂಡಾಯ(1946)

ಮಾರ್ಚ್

5-ಸ್ಟಾಲಿನ್ ನಿಧನ(1953)
8-ಅಂತರ್ರಾಷ್ಟ್ರೀಯ ಮಹಿಳಾ ದಿನ(1917)
14-ಕಾರ್ಲ್ ಮಾರ್ಕ್ಸ್ ನಿಧನ(1883)
18-ಪ್ಯಾರಿಸ್ ಕಮ್ಯೂನ್ ಘೋಷಣೆ(1871)
21-ಎ.ಕೆ.ಜಿ. ನಿಧನ(1977)
23-ಭಗತ್‌ಸಿಂಗ್ ಮತ್ತು ಸಂಗಾತಿಗಳ ಹುತಾತ್ಮ ದಿನ(1931)
29-ಕಯ್ಯೂರು ಕಮ್ಯುನಿಸ್ಟರಿಗೆ ನೇಣು(1943)

ಜನವರಿ 1991

ಸೋಮ		7	14	21	28
ಮಂಗಳ	1	8	15	22	29
ಬುಧ	2	9	16	23	30
ಗುರು	3	10	17	24	31
ಶುಕ್ರ	4	11	18	25	
ಶನಿ	5	12	19	26	
ಭಾನು	6	13	20	27	

ಫೆಬ್ರವರಿ 1991

ಸೋಮ		4	11	18	25
ಮಂಗಳ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	
ಶನಿ	2	9	16	23	
ಭಾನು	3	10	17	24	

ಮಾರ್ಚ್ 1991

ಸೋಮ		4	11	18	25
ಮಂಗಳ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30
ಭಾನು	3	10	17	24	31



ಭಾರತದಲ್ಲಿ ಕ್ರಾಂತಿಯ ಸಾಧನೆಗೆ ಆರು ದಶಕ
ನಿರಂತರ ಮಾರ್ಗದರ್ಶನ ಮಾಡಿದ ಕಾಂ: ಬಿ.ಟಿ.ರಣದಿವೆ

ಏಪ್ರಿಲ್

5-ಕೇರಳದಲ್ಲಿ ಮೊದಲ ಕಮ್ಯುನಿಸ್ಟ್ ಸರಕಾರ(1957)
6-ಬಿ.ಟಿ.ಆರ್. ನಿಧನ(1990)
18-ಕಂಪೂಚಿಯಾ ವಿಮೋಚನೆ(1975)
22-ಲೆನಿನ್ ಜನ್ಮ ದಿನ(1870)
30-ವಿಯೆಟ್ನಾಂ ವಿಮೋಚನೆ(1975).

ಮೇ

1-ಅಂತರರಾಷ್ಟ್ರೀಯ ದುಡಿಯುವ ಜನರ ದಿನ(1890) ಮುಂಬೈಯಲ್ಲಿ ಕಾರ್ಮಿಕರ ದಿನ(1927).
4-ಚೀನಾದಲ್ಲಿ ಮೇ 4 ಆಂದೋಲನ ಆರಂಭ(1921)
5-ಕಾರ್ಲ್ ಮಾರ್ಕ್ಸ್ ಜನ್ಮ ದಿನ(1818)
9-ದ್ವಿತೀಯ ಮಹಾಯುದ್ಧ ಅಂತ್ಯ(1945)
11-ಲಾವೋಸ್ ವಿಮೋಚನೆ(1976)
15-ಭಾರತ ಕಮ್ಯುನಿಸ್ಟ್ ಪಕ್ಷದ ಮೊದಲ ಪತ್ರಿಕೆ "ವ್ಯಾನ್‌ಗಾರ್ಡ್ ಆಫ್ ಇಂಡಿಯನ್ ಇಂಡಿಪೆಂಡೆಂಟ್" ಆರಂಭ(1922)
19-ಪಿ.ಸುಂದರಯ್ಯ ನಿಧನ(1985)
26-ಎಸ್.ಎಲ್. ನಿಧನ(1989)
30-ಸಿಐಟಿಯು ಸ್ಥಾಪನೆ(1970)

ಜೂನ್

9-ಡಿ.ವೈ.ಎಫ್.ಐ. ಸ್ಥಾಪನೆ(1968)
24-ವಿಯೆಟ್ನಾಂ ಏಕೀಕರಣ(1976)
26-ಆಂತರಿಕ ತುರ್ತುಪರಿಸ್ಥಿತಿ ಘೋಷಣೆ(1975)

ಏಪ್ರಿಲ್ 1991

ಸೋಮ	1	8	15	22	29
ಮಂಗಳ	2	9	16	23	30
ಬುಧ	3	10	17	24	
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	
ಭಾನು	7	14	21	28	

ಮೇ 1991

ಸೋಮ		6	13	20	27
ಮಂಗಳ		7	14	21	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	31
ಶನಿ	4	11	18	25	
ಭಾನು	5	12	19	26	

ಜೂನ್ 1991

ಸೋಮ		3	10	17	24
ಮಂಗಳ		4	11	18	25
ಬುಧ		5	12	19	26
ಗುರು		6	13	20	27
ಶುಕ್ರ		7	14	21	28
ಶನಿ	1	8	15	22	29
ಭಾನು	2	9	16	23	30



ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ದೇಶವನ್ನು ರಕ್ಷಿಸುತ್ತಾ ಏಕೀಕರಣ ಹೋರಾಟದಲ್ಲಿ ಪಾಲುಗೊಂಡ ಸ್ವಯಂಸೇವಕರ ಅಕ್ಕ ರತ್ನಾ ಶುಕಿ

ಜುಲೈ 1991


ಸೋಮ	1	8	15	22	29
ಮಂಗಳ	2	9	16	23	30
ಬುಧ	3	10	17	24	31
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	
ಭಾನು	7	14	21	28	

ಆಗಸ್ಟ್ 1991

ಸೋಮ		5	12	19	26
ಮಂಗಳ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9	16	23	30
ಶನಿ	3	10	17	24	31
ಭಾನು	4	11	18	25	

ಸೆಪ್ಟೆಂಬರ್ 1991

ಸೋಮ	30	2	9	16	23
ಮಂಗಳ		3	10	17	24
ಬುಧ		4	11	18	25
ಗುರು		5	12	19	26
ಶುಕ್ರ		6	13	20	27
ಶನಿ		7	14	21	28
ಭಾನು	1	8	15	22	29



ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ ದೇಶವನ್ನು ರಕ್ಷಿಸುತ್ತಾ ಏಕೀಕರಣ ಹೋರಾ-

ಜುಲೈ

1-ಚೀಣಾ ಕಮ್ಯುನಿಸ್ಟ್ ಪಕ್ಷ ಸ್ಥಾಪನೆ(1921)
4-ತೆಲಂಗಾಣಾ ಹೋರಾಟದ ಮೊದಲ ಹುತಾತ್ಮ ದಡ್ಡಿ ಕೋಮರಯ್ಯ(1940)
11-ಮಂಗೋಲಿಯಾ ಕ್ರಾಂತಿ(1921)
13-ಪ್ರಮೋದ್ ದಾಸ್ ಗುಪ್ತ ಜನ್ಮದಿನ(1910)

ಆಗಸ್ಟ್

5-ಎಂಗೆಲ್ಸ್ ನಿಧನ (1895)
ಮುಜಫರ್ ಅಹ್ಮದ್ ಜನ್ಮದಿನ(1889)

ಸೆಪ್ಟೆಂಬರ್

1-ಶಾಂತಿಗಾಗಿ, ಯುದ್ಧದ ವಿರುದ್ಧ ಅಂತರ್ರಾಷ್ಟ್ರೀಯ ಸೌಹಾರ್ದ ದಿನ
2-ವಿಯಟ್ನಾಂ ಜನವಾದಿ ಗಣತಂತ್ರದ ಘೋಷಣೆ(1945)
3-ಹೊ ಚಿ ಮಿನ್ಹ್ ನಿಧನ (1969
ಅಂತರ್ರಾಷ್ಟ್ರೀಯ ದುಡಿಯುವ ಜನರ ಸಂಘದ ಮೊದಲ ಮಹಾಧಿವೇಶನ, ಜಿನೀವಾ(1866)
9-ಮಾವೊ ನಿಧನ(1976)
12-ಕೊರಿಯಾ ಜನವಾದಿ ಗಣತಂತ್ರದ ಸ್ಥಾಪನೆ(1948)
23-ಪಾಬ್ಲೋ ನೆರುದಾ ಹತ್ಯೆ(1973)

ಅಕ್ಟೋಬರ್

1-ಚೀಣಾ ಜನತಾ ಗಣತಂತ್ರದ ಉದ್ಘಾಟನೆ(1949)
3-ಕಾರ್ಮಿಕ ಸಂಘಗಳ ವಿಶ್ವ ಒಕ್ಕೂಟ (ಡಬ್ಲ್ಯು.ಎಫ್.ಟಿ.ಯು.) ಸ್ಥಾಪನೆ(1945)
9-ಚೆಗೆವಾರಾ ಹತ್ಯೆ(1967)
17-ತಾಷ್ಕೆಂಟನಲ್ಲಿ ಸಿ.ಪಿ.ಐ. ಸ್ಥಾಪನೆ(1920)
24-ವಿಶ್ವಸಂಸ್ಥೆ ಸ್ಥಾಪನೆ (1945)
26-ಚೀಣಾದಲ್ಲಿ ದೀರ್ಘ ಪಯಣ ಆರಂಭ(1936)
31-ಎ.ಐ.ಟಿ.ಯು.ಸಿ.ಸ್ಥಾಪನೆ(1920)

ನವೆಂಬರ್

1-ಭಾಷಾವಾರು ಪ್ರಾಂತಗಳ ರಚನೆ -ಕರ್ನಾಟಕ, ಕೇರಳ, ಆಂಧ್ರ ಪ್ರದೇಶ(1956)
7-ರಷ್ಯಾದಲ್ಲಿ ಮಹಾನ್ ಸಮಾಜವಾದಿ ಕ್ರಾಂತಿ(1917)
29-ಪ್ರಮೋದ್‌ದಾಸ್‌ಗುಪ್ತ ನಿಧನ(1982)

ಡಿಸೆಂಬರ್

15-ಕಾಂ:ಪಿ.ರಾಮಮೂರ್ತಿ ನಿಧನ(1987)
18-ಕಾಂ:ಮುಜಫರ್ ಅಹ್ಮದ್ ನಿಧನ(1973)
19-ಬಿ.ಟಿ.ಆರ್. ಜನ್ಮದಿನ(1904)
24-ಲೆನಿನ್‌ರ 'ಇಸ್ಕ್ರಾ'ದ ಮೊದಲ ಸಂಚಿಕೆ(1900)
30-ಸೋವಿಯತ್ ಒಕ್ಕೂಟ ಸ್ಥಾಪನೆ(1922)

ಚೀಣೀ ಸಮಾಜವಾದಿ ಕ್ರಾಂತಿ ಸಾಧಿಸಿದ ದೀರ್ಘ ಪಯಣಿಗರು ಮತ್ತು ಕ್ರಾಂತಿಯ ನೇತಾರ ಮಾವೋ



ಮಹಾನ್ ರಷ್ಯನ್ ಸಮಾಜವಾದಿ ಕ್ರಾಂತಿ ಹಾಗೂ ಅದರ ನೇತಾರ ಲೆನಿನ್. ಗೊಂಡು ಸ್ಮಾರಕ



ಅಕ್ಟೋಬರ್ 1991

ಸೋಮ		7	14	21	28
ಮಂಗಳ	1	8	15	22	29
ಬುಧ	2	9	16	23	30
ಗುರು	3	10	17	24	31
ಶುಕ್ರ	4	11	18	25	
ಶನಿ	5	12	19	26	
ಭಾನು	6	13	20	27	

ನವೆಂಬರ್ 1991

ಸೋಮ		4	11	18	25
ಮಂಗಳ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30
ಭಾನು	3	10	17	24	

ಡಿಸೆಂಬರ್ 1991

ಸೋಮ	30	2	9	16	23
ಮಂಗಳ	31	3	10	17	24
ಬುಧ		4	11	18	25
ಗುರು		5	12	19	26
ಶುಕ್ರ		6	13	20	27
ಶನಿ		7	14	21	28
ಭಾನು	1	8	15	22	29

ಚುನಾವಣಾ ಕಮಿಷನರ್ ನೇಮಕದ ಅನ್ಯಾಯ

ಸಮಾಜವಾದಿ ಎಂದು ಬೊಗಳೆ ಬಿಡುವ ಚಂದ್ರಶೇಖರ್ ನೇತೃತ್ವದ ಸರಕಾರ ಮಹಿಳೆಯನ್ನು ಕಡೆಗಣಿಸುವ, (ಹಾಗೆಸ್ಮೃತಿಯಂತೆ ಅವಮಾನಿಸುವ ಎನ್ನುವುದೇ ಸೂಕ್ತ) ಕ್ರಮಗಳನ್ನು ಅನುಸರಿಸತೊಡಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಮಧ್ಯಯುಗದ 'ಸತಿ' ಪದ್ಧತಿಯನ್ನು ಬೆಂಬಲಿಸಿದ ಕಲ್ಯಾಣ್ ಸಿಂಗ್ ಕಲ್ವಿ ಕೇಂದ್ರದ ಮಂತ್ರಿಯಾಗಿದ್ದು ಒಂದು ಪ್ರಕರಣ. ಈಗ ದೇಶದ ಮುಖ್ಯ ಚುನಾವಣಾ ಕಮಿಷನರ್(ಸಿ.ಇ.ಸಿ) ಹುದ್ದೆಯಿಂದ ವಿ.ಎಸ್.ರಮಾದೇವಿಯವರನ್ನು ವಂಚಿಸಿದ್ದು ಎರಡನೆಯದು. (ಈ ಮಧ್ಯೆ ಮಹಿಳೆಯನ್ನು ಅವಮಾನಿಸುವ ಅಣಿಮುತ್ತುಗಳನ್ನು ಭಾರತದ ಮುಖ್ಯ ನ್ಯಾಯಾಧೀಶರು ಉದುರಿಸಿ, ತೀವ್ರ ಪ್ರತಿಭಟನೆ ಬಂದ ಮೇಲೆ ಅವನ್ನು ವಾಪಸ್ ಪಡೆದ ಘಟನೆ ನಡೆದಿದೆ).

ತೀವ್ರ ಅನಾರೋಗ್ಯದಿಂದ ಮುಖ್ಯ ಚುನಾವಣಾ ಕಮಿಷನರ್ ಪೇರಿ ಶಾಸ್ತ್ರಿ (3 ತಿಂಗಳು) ರಜೆ ಮೇಲೆ ತೆರಳಿದ್ದಾಗ ಕಾನೂನು ಮತ್ತು ನ್ಯಾಯಾಂಗ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿದ್ದ ರಮಾದೇವಿಯವರನ್ನು ಮೂರು ತಿಂಗಳ ಅವಧಿಗಾಗಿ ಸಿ.ಇ.ಸಿ. ಹುದ್ದೆಗೆ ಹಂಗಾಮಿಯಾಗಿ ನೇಮಿಸಲಾಗಿತ್ತು. ನವೆಂಬರ್ 15 ರಂದು ಆ ಬಗ್ಗೆ ಆಜ್ಞೆ ಹೊರಟಿತ್ತು.

ರಜೆಯಲ್ಲಿದ್ದಾಗಲೇ ಅಸ್ವಸ್ಥತೆಯಿಂದ ಚೇತರಿಸದ ಪೆರಿಶಾಸ್ತ್ರಿ ನಿಧನರಾದ್ದರಿಂದ ರಮಾದೇವಿ ಅವರೇ ಸಿ.ಇ.ಸಿ. ಆಗುವರೆಂದು ನಿರೀಕ್ಷಿಸಲಾಗಿತ್ತು. ದೇಶದ ಮೊತ್ತ ಮೊದಲ ಮಹಿಳಾ ಸಿ.ಇ.ಸಿ. ಅವರಾಗುತ್ತಿದ್ದರು. ಆದರೆ ಇದ್ದಕ್ಕಿದಂತೆ ಎಲ್ಲರ ನಿರೀಕ್ಷೆ ಹುಸಿಯಾಗಿ ಟಿ.ಎನ್. ಶೇಷನ್ ಈಗ ಸಿ.ಇ.ಸಿ. ಆಗಿದ್ದಾರೆ. ಕೇಂದ್ರ ಸರ್ಕಾರ ಶೇಷನ್‌ರನ್ನು ಈ ಹುದ್ದೆಗೆ ನೇಮಿಸಿರುವುದರಿಂದ ಆಶ್ಚರ್ಯ ಮಾತ್ರವಲ್ಲ ಅನುಮಾನಕ್ಕೂ ಎಡೆಯಾಗಿದೆ.

ಮಹಿಳೆ ದಕ್ಷೆ ಮಾತ್ರವಲ್ಲ, ಭಾರತದ ಕಾನೂನು ಸೇವೆಯಲ್ಲಿ ಅತ್ಯಂತ ಹಿರಿಯ ಅಧಿಕಾರಿಯಾಗಿರುವ ರಮಾದೇವಿಗೆ ಸಿ.ಇ.ಸಿ. ಹುದ್ದೆಯಿಂದ ಕೊಕ್ ಕೊಡಲು ಕಾರಣವಾದರೂ ಏನು? ಮೊದಲನೆಯದಾಗಿ, ಮೇಹಂನ ಮರುಚುನಾವಣೆಯನ್ನು ವಿನಾಕಾರಣ ಮುಂದೂಡುತ್ತಿರುವ ಬಗ್ಗೆ ರಮಾದೇವಿ ಹರಿಯಾಣ ಸರಕಾರವನ್ನು ತರಾಟೆಗೆ ತೆಗೆದುಕೊಂಡಿರುವುದು, ಎರಡನೆಯದಾಗಿ, 'ತರಲೆ ತಿಮ್ಮಪ್ಪ' ಎನ್ನಬಹುದಾದ ವಾಣಿಜ್ಯ, ಕಾನೂನು ಮತ್ತು ನ್ಯಾಯ(!) ಸಚಿವ ಡಾ:ಸುಬ್ರಹ್ಮಣ್ಯಂಸ್ವಾಮಿಯವರ ಕೈ(ಪ)ವಾಡ!

ರಮಾದೇವಿಯವರನ್ನು ಸಿ.ಇ.ಸಿ.ಯಾಗಿ ನೇಮಿಸಬೇಕೆಂಬ ಪ್ರಧಾನಮಂತ್ರಿಯವರ ಮುಖ್ಯಕಾರ್ಯದರ್ಶಿ ಬಿ.ಜಿ.ದೇಶ್‌ಮುಖ್‌ರವರ(ಈಗ ರಾಜಿನಾಮೆ ನೀಡಿದ್ದಾರೆ) ಶಿಫಾರಸು ಪತ್ರ ಎಲ್ಲಾ ದಾಖಲೆಗಳ ಸಹಿತ ರಾಷ್ಟ್ರಪತಿಯವರ ಸಹಿಗಾಗಿ ರಾಷ್ಟ್ರಪತಿ ಭವನ ತಲುಪಿತ್ತು. ಆದರೆ ಡಾ:ಸ್ವಾಮಿ ಮೂಗು ತೂರಿಸಿ ಶೇಷನ್ ಸಿ.ಇ.ಸಿ. ಆಗುವಂತೆ ಮಾಡಿದರು. ಮುಖ್ಯ ಚುನಾವಣಾ ಕಮಿಷನರ್‌ಗೆ ಸುಪ್ರಿಂಕೋರ್ಟ್ ನ್ಯಾಯಾಧೀಶರ ಸ್ಥಾನಮಾನವಿರುತ್ತದೆ.

ಯಾರೀ ಶೇಷನ್?: ಟಿ.ಎನ್.ಶೇಷನ್‌ಗೆ ಚುನಾವಣಾ ಕಾನೂನಿನ ಪರಿಜ್ಞಾನವಿಲ್ಲ ಎಂಬುದೊಂದೇ ಅನರ್ಹತೆ ಎಂದು ಹೇಳುವುದು ಸರಿಯಾಗದು. ಅದಕ್ಕೂ ಮಿಗಿಲಾದದ್ದೆಂದರೆ, ಅವರು(ಶೇಷನ್) ಹಿಂದೆ ರಾಜೀವ್ ಗಾಂಧಿ ಪ್ರಧಾನಿಯಾಗಿದ್ದಾಗ (ಈಗ ಸೂತ್ರಧಾರಿ ಪ್ರಧಾನಿ) ಸಂಪುಟ ಕಾರ್ಯದರ್ಶಿ ಆಗಿದ್ದರು. ಮಾತ್ರವಲ್ಲ, ರಾಜೀವ್‌ರ 'ನಿಷ್ಠಾವಂತ' ಎಂಬ ಖ್ಯಾತಿಯೂ ಇರುವುದರಿಂದ ಅವರ ನೇಮಕ ಅಪ್ಪಟ ರಾಜಕೀಯ ಪಕೀಲಿಯ ಫಲಿತಾಂಶ ಎನ್ನುವುದರಲ್ಲಿ ಯಾವುದೇ ಸಂಶಯ ಇರಲಾರದು. ಬೋಫೋರ್ಸ್ ವಿವಾದವನ್ನು ಮುಚ್ಚಿಹಾಕಲು ಸಂಪುಟ ಕಾರ್ಯದರ್ಶಿಯಾಗಿದ್ದಾಗ ಶೇಷನ್ ಪ್ರಯತ್ನಿಸಿದ್ದು ಬಹಿರಂಗ ರಹಸ್ಯ. ಅಂಥ ಒಬ್ಬ ವ್ಯಕ್ತಿಯಿಂದ ಚುನಾವಣಾ ಆಯೋಗದ ಕಾರ್ಯನಿರ್ವಹಣೆ ಬಗ್ಗೆ ಉತ್ತಮವಾದುದೇನನ್ನೂ ನಿರೀಕ್ಷಿಸಲಾಗದು ಎಂಬುದು ಆತಂಕದ ವಿಚಾರವಾಗಿದೆ. ಶೇಷನ್ ನೇಮಕವನ್ನು ಕೆಲವು ನಿಷ್ಠಾವಂತ ಅಧಿಕಾರಿಗಳು ಕೂಡ ಸಂದೇಹ ದೃಷ್ಟಿಯಿಂದ ನೋಡತೊಡಗಿದ್ದಾರೆ. ಇನ್ನೀಗ ಚುನಾವಣಾ ಆಯೋಗದಲ್ಲಿ ರಾಜೀವ್ ಗಾಂಧಿ 'ಕೈ' ಒಳ್ಳೆ ಓಡಾಡುತ್ತದೆ ಎನ್ನಲಡ್ಡಿಯಿಲ್ಲ.

ಮಹಿಳಾ ಸಂಘಟನೆಗಳ ಉಗ್ರ ವಿರೋಧ

ವಿ.ಎಸ್.ರಮಾದೇವಿಯವರು ಭಾರತದ ಮುಖ್ಯ ಚುನಾವಣಾ ಕಮಿಷನರ್ ಆಗುವುದನ್ನು ತಪ್ಪಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಸಹಿತ ಅನೇಕ ಮಹಿಳಾ ಸಂಘಟನೆಗಳು ಉಗ್ರವಾಗಿ ಖಂಡಿಸಿವೆ.

ಭಾರತೀಯ ಮಹಿಳೆಯರ ಒಕ್ಕೂಟ, ಮಹಿಳಾ ದಕ್ಷತಾ ಸಮಿತಿ ಇವೇ ಮೊದಲಾದುವು ಐಕ್ಯ ವಿರೋಧಕ್ಕೆ ದನಿಗೂಡಿಸಿರುವ ಸಂಘಟನೆಗಳು

ಸರಕಾರದಿಂದಲೇ ಮಾನವ ಸರಪಳಿ

ಮಾನವ ಸರಪಳಿ ಈಗೀಗ ದೇಶದಲ್ಲಿ ಪ್ರಚಲಿತವಾಗುತ್ತಿರುವ ಚಳುವಳಿಯ ಒಂದು ಮಾರ್ಗವಾಗಿದೆ. ಅದರಲ್ಲೂ ವಿಶೇಷವಾಗಿ ಕೋಮು ಸೌಹಾರ್ದತೆ- ರಾಷ್ಟ್ರೀಯ ಐಕ್ಯತೆ ಸಂದೇಶ ಸಾರುವ ಕಾರ್ಯಕ್ಕೆ ಹೆಚ್ಚಾಗಿ ಅದನ್ನು ಬಳಸಲಾಗುತ್ತಿದೆ. ಇದೀಗ ಒಂದು ಸರಕಾರವೇ 'ಮಾನವ ಸರಪಳಿ'ಗೆ ಕರೆಕೊಡಲು ಸಜ್ಜಾಗುತ್ತಿರುವ ವಿಶೇಷ ಬೆಳವಣಿಗೆಯೊಂದು ಕಂಡು ಬಂದಿದೆ.

ಗುಜರಾತ್‌ನಲ್ಲಿ ಸರ್ದಾರ್ ಸರೋವರ್ ಆಣೆಕಟ್ಟು ಯೋಜನೆಯನ್ನು 'ಪರಿಸರವಾದಿಗಳು' ವಿರೋಧಿಸುತ್ತಿದ್ದಾರೆ. ಬಾಬಾ ಆಮ್ಟೆ ಮೊದಲಾದವರು ಈ ಚಳುವಳಿಗೆ ನಾಯಕತ್ವ ಕೊಡುತ್ತಿದ್ದಾರೆ. ಯೋಜನೆ ಜಾರಿಗೊಳಿಸುವುದನ್ನು ತಡೆಯಲಿಕ್ಕಾಗಿ ಅವರ ನೇತೃತ್ವದಲ್ಲಿ ಮಧ್ಯಪ್ರದೇಶದಿಂದ ಒಂದು ಜಾಥಾವೇ ಹೊರಟಿದೆ. ಆಣೆಕಟ್ಟು ನಿರ್ಮಾಣದಿಂದ ಕೆಲ ಪ್ರದೇಶ ಮುಳುಗಡೆಯಾಗುವುದು ಹೌದಾದರೂ ದಕ್ಕಿಂತ ಹೆಚ್ಚಿನ ಪ್ರಯೋಜನ ನೀರಾವರಿ ಸೌಲಭ್ಯದಿಂದಾಗಿ ಲಭಿಸುತ್ತದೆ.

ಇದನ್ನು ಗಮನದಲ್ಲಿಟ್ಟುಕೊಂಡು ಗುಜರಾತ್ ಸರ್ಕಾರ ಯೋಜನೆಗೆ ಅಡ್ಡಿ ಬರುವವರನ್ನು ತಡೆಯಲು ತೀವ್ರ ಆಂದೋಲನವನ್ನೇ ನಡೆಸುವುದಾಗಿ ಹೇಳಿದೆ. ಅದಕ್ಕದು ಆರಿಸಿಕೊಂಡಿರುವ ಮಾರ್ಗ ಮಾನವ ಸರಪಳಿ. ಈಗಾಗಲೇ ಹೇಳಿರುವಂತೆ ಹೊರಟಿರುವ ಜಾಥಾವನ್ನು ಮಧ್ಯಪ್ರದೇಶದ ಗಡಿಯಲ್ಲೇ ತಡೆಯಲಿಕ್ಕಾಗಿ ಡಿಸೆಂಬರ್ 29 ರಂದು ಒಂದು ಲಕ್ಷ ಜನರ ಮಾನವ ಸರಪಳಿಯನ್ನು ನಿರ್ಮಿಸುವುದಾಗಿ ಮುಖ್ಯಮಂತ್ರಿ ಚಿಮಣ್ ಭೈ ಪಟೇಲ್ ಹೇಳಿದ್ದಾರೆ.

ಈ ಮಧ್ಯೆ ಎರಡೂ ರಾಜ್ಯಗಳ ಹಿರಿಯ ಅಧಿಕಾರಿಗಳು ಸಮಾಲೋಚನೆ ನಡೆಸಿ ಸರ್ದಾರ್ ಯೋಜನೆ ತಡೆಯುವವರನ್ನು ನಿಯಂತ್ರಿಸುವ ಬಗ್ಗೆ ಯೋಜನೆ ರೂಪಿಸಿದ್ದಾರೆ.

ತಾಲಿಬ್ ಕೊಲೆ ಇಬ್ಬರ ಬಂಧನ

ಆಕಾಶವಾಣಿ ಚಂಡೀಗಢ ನಿಲಯ ನಿರ್ದೇಶಕ ಆರ್.ಕೆ.ತಾಲಿಬ್‌ರನ್ನು ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿವರೆನ್ನಲಾದ ಇಬ್ಬರು ಭಯೋತ್ಪಾದಕರನ್ನು ಪಂಜಾಬ್ ಪೋಲೀಸರು ಬಂಧಿಸಿದ್ದಾರೆ.

ಭಯೋತ್ಪಾದಕರ 'ನೀತಿಸಂಹಿತೆ' ಗೆ ಎಳ್ಳಷ್ಟೂ ಬಗ್ಗದೆ ಧೈರ್ಯ ತೋರಿದ ತಾಲಿಬ್‌ರನ್ನು ಹೇಡಿಗಳು ಚಂಡೀಗಢದಲ್ಲಿ ಗುಂಡಿಟ್ಟು ಕೊಂದು ಪ್ರಶಾಂತ ಮುಂಜಾವನ್ನು ರಕ್ತದಿಂದ ತೋಯಿಸಿದ್ದರು.

ಕಾಶ್ಮೀರ ಕಣಿವೆಯಲ್ಲಿ

ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿಗಳ ಹಾವಳಿ ಮುಂದುವರಿದಿದ್ದು ಭದ್ರತಾ ಪಡೆಗಳ ಕಾರ್ಯಾಚರಣೆ ಕೂಡ ಸಾಗಿದೆ. ಡಿಸೆಂಬರ್ 20ರಂದು ಈ ರಂಗದಲ್ಲಿ ಒಂದು ದೊಡ್ಡ ಸಾಧನೆ ತೋರಲಾಯಿತು.

ಕಾಶ್ಮೀರದಲ್ಲಿ ನೈಜ ನಿಯಂತ್ರಣ ರೇಖೆಯಲ್ಲಿ ಗಡಿದಾಟಿ ಬರುತ್ತಿದ್ದ ದುಶ್ಕರ್ಮಿಗಳ ಪೈಕಿ ಮೂವರನ್ನು ಭದ್ರತಾ ಸಿಬ್ಬಂದಿಗಳು ಗುಂಡಿಟ್ಟು ಕೊಂದರು. 81 ಜನರನ್ನು ಬಂಧಿಸಿದರು.

ಪಾಂಡಿಚೇರಿಯಲ್ಲಿ ಬಿಕ್ಕಟ್ಟು

ಕೇಂದ್ರಾಡಳಿತ ಪ್ರದೇಶ ಪಾಂಡಿಚೇರಿಯಲ್ಲಿ ಇರುವ ಡಿಎಂಕೆ-ಜನತಾದಳ ಸಮ್ಮಿಶ್ರ ಸರಕಾರಕ್ಕೆ ದಳದ ಮೂವರು ಶಾಸಕರು(ಇಬ್ಬರು ಮಂತ್ರಿಗಳು, ಒಬ್ಬರು ಉಪಸ್ಪೀಕರ್) ಡಿಸೆಂಬರ್ 20 ರಂದು ಸರಕಾರಕ್ಕೆ ಬೆಂಬಲ ವಾಪಸ್ ಪಡೆದರು. ಇದರಿಂದ ಸರಕಾರದ ಸ್ಥಿತಿ ಅತಂತ್ರವಾಯಿತು. ಬೆಂಬಲ ವಾಪಸ್ ಪಡೆದವರು ತಮ್ಮನ್ನು ಜನತಾದಳ(ಎಸ್)ನವರು ಎಂಬುದಾಗಿ ಹೇಳಿಕೊಂಡರು. ಅದೇ ದಿನ ರಾತ್ರಿ ಅವರಲ್ಲಿ ಇಬ್ಬರ ಸದಸ್ಯತ್ವವನ್ನು ಸ್ಪೀಕರ್ ಅನರ್ಹಗೊಳಿಸಿದರು.

ತಮ್ಮ ಸರಕಾರದ ಬಲಾಬಲವನ್ನು ಸದನದಲ್ಲಿ ಪ್ರದರ್ಶಿಸುವುದಾಗಿ ಹೇಳಿದ ಮುಖ್ಯಮಂತ್ರಿ ಡಿ.ರಾಮಚಂದ್ರನ್‌ರ ಮಾತನ್ನು ಕಡೆಗಣಿಸಿದ ಉಪರಾಜ್ಯಪಾಲ ಡಾ: ಹರ್‌ಸ್ವರೂಪ್ ಸಿಂಗ್ ವಿಚಿತ್ರವಾಗಿ ವರ್ತಿಸಿದರು. ರಾಜಭವನದಲ್ಲಿ ಬಲಾಬಲ ಪ್ರದರ್ಶಿಸುವಂತೆ ಅವರು ಮಾಡಿದ ಸಲಹೆಯನ್ನು ಮುಖ್ಯಮಂತ್ರಿ ತಳ್ಳಿಹಾಕಿದರು. ಇಬ್ಬರೂ ಅವರವರ ಪಟ್ಟು ಹಿಡಿದರು. ಕೊನೆಗೂ ಉಪರಾಜ್ಯಪಾಲರು ತಮ್ಮ 'ವಿಚಿತ್ರ' ನಿಲುವನ್ನು ತೊರೆದು ವಿಧಾನ ಸಭೆಯಲ್ಲಿ ಬಹುಮತ ಸಾಬೀತು ಪಡಿಸುವಂತೆ ಮುಖ್ಯಮಂತ್ರಿಯವರಿಗೆ ಸೂಚಿಸಿದ್ದಾರೆ. ಡಿ.27 ರಂದು ಅದಕ್ಕಾಗಿ ವಿಧಾನಸಭೆಯ ವಿಶೇಷ ಅಧಿವೇಶನ ನಿಗದಿಯಾಗಿದೆ. ಈ ಸಂಚಿಕೆ ಓದುಗರ ಕೈ ಸೇರುವ ವೇಳೆಗೆ ಫಲಿತಾಂಶ ಏನೆಂದು ಗೊತ್ತಾಗಿರುತ್ತದೆ.

ಗುಜರಾತ್

ಅಧಿಕಾರ ಉಳಿಸಿಕೊಳ್ಳುವ ಏಕೈಕ ಉದ್ದೇಶದಿಂದ ಕಾಂಗ್ರೆಸ್(ಐ) ನೆರವು ಪಡೆದಿದ್ದ ಗುಜರಾತ್ ಮುಖ್ಯಮಂತ್ರಿ ಚಿಮಣ್ ಭಾಯಿ ಪಟೇಲ್ ಸಂಪುಟ ಬಿಕ್ಕಟ್ಟಿಗೆ ಸಿಲುಕಿದೆ. ಪಟೇಲ್‌ರ ಕಟ್ಟಾ ವಿರೋಧಿಯಾದ ಪ್ರವೀಣ್‌ಸಿಂಗ್ ಜಡೇಜಾ ನೇತೃತ್ವದಲ್ಲಿ 24 ಜನತಾದಳ ಮತ್ತು 6 ಪಕ್ಷೇತರ ಶಾಸಕರು ಸರಕಾರಕ್ಕೆ ಬಂಬಲ ವಾಪಸ್ ಪಡೆದಿದ್ದಾರೆ. ಆದರೆ ತಮ್ಮ ಸರಕಾರಕ್ಕೆ ಯಾವುದೇ ಬೆದರಿಕೆಯಿಲ್ಲ ಎಂದು ಮುಖ್ಯಮಂತ್ರಿ ಹೇಳಿಕೊಂಡಿದ್ದಾರೆ.

ಗುಜರಾತ್ ಸಂಪುಟಕ್ಕೆ ಕೆಲವರ ಬೆಂಬಲ ವಾಪಸಾತಿಯ ಹಿನ್ನೆಲೆಯಲ್ಲಿ ರಾಜ್ಯದ ರಾಜಕೀಯ ಚಟುವಟಿಕೆಗಳು ಇನ್ನೊಮ್ಮೆ ತೀವ್ರಗೊಂಡಿದೆ.

ರಿಸರ್ವ್ ಬ್ಯಾಂಕಿಗೆ ಹೊಸ ಗವರ್ನರ್

ಭಾರತೀಯ ರಿಸರ್ವ್ ಬ್ಯಾಂಕಿಗೆ ಗವರ್ನರ್ ಹುದ್ದೆಗೆ ಆರ್.ಎನ್. ಮಲ್ಹೋತ್ರಾ ರಾಜೀನಾಮೆ ಸಲ್ಲಿಸಿದ್ದಾರೆ. ಅವರ ಸ್ಥಾನದಲ್ಲಿ ಎಸ್.ವೆಂಕಟರಮಣ ಅಧಿಕಾರ ಸ್ವೀಕರಿಸಿದ್ದಾರೆ. ವೆಂಕಟರಮಣ ಹಿಂದೆ ಕೇಂದ್ರ ಹಣಕಾಸು ಖಾತೆಯ ಕಾರ್ಯದರ್ಶಿಯಾಗಿದ್ದರು.

ಎಸ್.ಗೋಯೆಂಕಾ!

ತಾವು ಅಧಿಕಾರದಲ್ಲಿ ಇಲ್ಲದಿದ್ದಾಗ [illegible] ಅಥವಾ ಅಧಿಕಾರದಲ್ಲಿದ್ದವರಿಗೆ [illegible] ಮಾಡುವುದೇ ಅಭ್ಯಾಸವಿದ್ದಾಗ) ಗುತ್ತೇದಾ[illegible] ಬಂಡವಾಳಶಾಹಿ-ಬಹುರಾಷ್ಟ್ರೀಯ ಕಂಪನಿಗ[illegible] ವಿರುದ್ಧ ಗುಡುಗುತ್ತಿದ್ದ ಎಸ್(ಅಂದರೆ ಸೋಶ[illegible] ಲಿಸ್ಟ್) ಚಂದ್ರಶೇಖರ್ ಈಗ ಎಸ್[illegible] ಗೋಯೆಂಕಾ ಎನ್ನಿಸತೊಡಗಿದ್ದಾರೆ!

ಈ ತಿಂಗಳು ಕಲ್ಕತ್ತಕ್ಕೆ ಭೇಟಿ ನೀಡಿ[illegible] ಸಂದರ್ಭದಲ್ಲಿ ಪ್ರಧಾನಿ ಶೇಖರ್ ಭೇ[illegible] ಮಾಡಿದ ಒಂದು ಸ್ಥಳ-ಭಾರಿ ಕೈಗಾರಿಕೋ[illegible] ದ್ಯಮಿ ಆರ್.ಪಿ.ಗೋಯೆಂಕಾ ಅವರ ಮ[illegible] ದೇಶದ ಅನೇಕ ಕಾನೂನುಗಳ ಉಲ್ಲಂಘನೆ[illegible] ಗಾಗಿ ಸರಕಾರದಿಂದ ವಿಚಾರಣೆಗೆ ಒಳಗಾಗಿ[illegible] ರುವ ಒಬ್ಬ ಉದ್ಯಮಿಯ ಜತೆ ಪ್ರಧಾನಿಯ[illegible] ವರ 'ಸರಸ' ಭಾನಗಡಿ ತರುವ ವಿಚಾರವಲ್ಲ[illegible] ಈ ರೀತಿ ಯಾವುದೇ ಒಬ್ಬ ಕೈಗಾರಿಕೋದ್ಯ[illegible] ಮಿಯನ್ನು ಖಾಸಗಿಯಾಗಿ ಪ್ರಧಾನಿಯೊಬ್ಬರ[illegible] ಭೇಟಿಯಾಗಿ ಗೌರವ ಸಲ್ಲಿಸಿದ್ದು ದೇಶದ ಇತಿ[illegible] ಹಾಸದಲ್ಲಿ ಇದು ಮೊದಲ ಪ್ರಕರಣವಾಗಿದೆ.

ದೇಶದೊಳಗೆ

ಬಿಹಾರ: ಬಿಜೆಪಿ ಶಾಸಕರ ವಜಾ

ಬಿಹಾರದಲ್ಲಿ ಜನತಾದಳ ಸರಕಾರವನ್ನು ಉರುಳಿಸಲು ವಿಫಲವಾದ ಭಾರತೀಯ ಜನತಾ ಪಕ್ಷ ಈಗ ತನ್ನ 9 ಶಾಸಕರನ್ನು ವಜಾ ಮಾಡಿದೆ.

ನವೆಂಬರ್ ತಿಂಗಳಲ್ಲಿ ಮುಖ್ಯಮಂತ್ರಿ ಲಲ್ಲೂ ಪ್ರಸಾದ್ ಯಾದವ್ ವಿಶ್ವಾಸಮತ ಕೋರಿದಾಗ ಅದನ್ನು ವಿರೋಧಿಸಿ ಮತ ನೀಡುವಂತೆ ಬಿಜೆಪಿ ಬಿಹಾರ ಶಾಸಕರಿಗೆ ಆದೇಶಿಸಿತ್ತು. ಆದರೆ ಒಂಬತ್ತು ಸದಸ್ಯರು ಅದನ್ನು ಪಾಲಿಸಿರಲಿಲ್ಲ. ಒಂದು ವೇಳೆ ಬಿಜೆಪಿಯ ಎಲ್ಲಾ ಸದಸ್ಯರು ವಿರೋಧಿಸಿದ್ದರೂ ಸರಕಾರವೇನೂ ಉರುಳಿ ಹೋಗುತ್ತಿರಲಿಲ್ಲ.

ಉತ್ತರ ಪ್ರದೇಶ ಮತ್ತು ಗುಜರಾತ್‌ನಲ್ಲಿ ಜನತಾದಳ ಸರಕಾರ ಹೋಗಿ ಜನತಾದಳ(ಎಸ್) ಸರಕಾರ ಆಗಿದ್ದವು. ಆದರೆ ಬಿಹಾರದಲ್ಲಿ ಲಲ್ಲೂ ದೃಢವಾಗಿ ನಿಂತು ಜನತಾದಳ ಸರಕಾರವನ್ನು ಉಳಿಸಬೇಕೆಂದು ಮಾಡಿದ ಪ್ರಯತ್ನಕ್ಕೆ ಸಿಪಿಐ(ಎಂ), ಸಿಪಿಐ, ಜಾರ್ಖಂಡ್ ಮುಕ್ತಿ ಮೋರ್ಚ ಮತ್ತು ಪಕ್ಷೇತರ ಸದಸ್ಯರು ಆಸರೆಯಾಗಿ ನಿಂತಿದ್ದರು.

ಹಿಂದೂ ಧರ್ಮದ ಹೆಸರು ಹೇಳಿದ ಕೂಡಲೇ ಎಲ್ಲರೂ ತಮ್ಮ ಹಿಂದೆ ಸಾಲುಗಟ್ಟಿ ಬರುತ್ತಾರೆ ಎಂಬ ಬಿಜೆಪಿ ನಾಯಕರ ಭ್ರಮೆಗೆ 9 ಶಾಸಕರು ತಣ್ಣೀರೆರಚಿದ್ದರು.

ನಿರರ್ಥಕಗೊಂಡ ಅನಗಳ್ಳಿ ಆಣೆಕಟ್ಟು

ಕುಂದಾಪುರ ತಾಲೂಕಿನ ಆನಗಳ್ಳಿ ಬಳಿ ಸಣ್ಣ ನೀರಾವರಿ ಇಲಾಖೆ ಸುತ್ತಲಿನ ಗ್ರಾಮಗಳ ರೈತರಿಗೆ ನೀರಾವರಿ ಅನುಕೂಲಕ್ಕೆಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಉಪ್ಪು ನೀರು ತಡೆ ಆಣೆಕಟ್ಟು ನಿರ್ಮಿಸಿದ್ದರೂ ಅದು ರೈತರ ಮಟ್ಟಿಗೆ ನಿರರ್ಥಕವೇ ಆಗಿದೆ. ಮಳೆಗಾಲ ಕಳೆದು ಸೆಪ್ಟೆಂಬರ್ ತಿಂಗಳಲ್ಲಿ ಆಣೆಕಟ್ಟಿಗೆ ಹಲಗೆ ಹಾಕಿ[illegible]ದಲ್ಲಿ ಉಪ್ಪು ನೀರು ತಡೆಗಟ್ಟಿ ಸುತ್ತಲಿನ ಗ್ರಾಮಗಳಾದ ಕೋಣಿ, ಕುಂದಾಪುರ, ಆನಗಳ್ಳಿ, ವಡೇರ ಹೋಬಳಿಯ ರೈತರಿಗೆ ಎರಡನೇ ಫಸಲು ಬೆಳೆಯಲು [illegible] ಬೆಳೆಯಲು ಅನುಕೂಲವಾಗುತ್ತಿತ್ತು. ಸುತ್ತಲಿನ ಬಾವಿಗಳಲ್ಲಿ [illegible] ಒದಗಿಸುವುದು ಸಾಧ್ಯವಿತ್ತು. ಆದರೆ ಇಲಾಖೆಯು, ಸರಕಾರದ [illegible] ಸಾಧ್ಯವಾಗಲಿಲ್ಲವೆಂದು ಕೋಟೇಶ್ವರ ಮಂಡಲ ಪಂಚಾಯತ್ ಸದಸ್ಯ ವೆಂಕಟೇಶ ಕೋಣೆ ತಿಳಿಸಿದ್ದಾರೆ. ಆಣೆಕಟ್ಟಿನ ಕಾಂಕ್ರೀಟ್ ಬೆಡ್‌ನಿಂದ ಸೋರಿ ಉಪ್ಪು ನೀರು ಒಳನುಗ್ಗುತ್ತಿರುವುದು ಇಲಾಖೆಯ, ಸರಕಾರದ ಗಮನಕ್ಕೆ ಬಂದಿದ್ದರೂ ಏನೂ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಇಲಾಖೆಗೆ, ಸರಕಾರಕ್ಕೆ ಹಲವಾರು ಮನವಿ ಸಲ್ಲಿಸಿದ್ದರೂ ಉಪಯೋಗವಾಗಿಲ್ಲ. ಕೋಟೇಶ್ವರ ಮಂಡಲ ಪಂಚಾಯತ್‌ನ ಮೇಲಧಿಕಾರಿಗಳ ಗಮನ ಸೆಳೆಯುವ ಪ್ರಯತ್ನಗಳಿಗೂ ಇದು-

ಅಫಜಲ್‌ಪೂರ ಅಂಗನವಾಡಿ ಕಾರ್ಯಕರ್ತೆಯರ ಸಭೆ

ಅಂಗನವಾಡಿ ನೌಕರರ ಗುಲ್ಬರ್ಗಾ ಜಿಲ್ಲಾ ಶಾಖೆಯ ಅಧ್ಯಕ್ಷರಾದ ಕಾಂ. ಮಾರುತಿ ಮಾನ್ಪಡೆ ಹಾಗೂ ಉಪಾಧ್ಯಕ್ಷರಾದ ರುಕ್ಮಿಣಿಬಾಯಿ ಅವರ ನೇತೃತ್ವದಲ್ಲಿ ದಿನಾಂಕ 10-12-90 ರಂದು ಅಫಜಲ್ ಪುರದಲ್ಲಿ ತಾಲೂಕಿನ ಅಂಗನವಾಡಿ ಕಾರ್ಯಕರ್ತರ ಹಾಗೂ ಪರಿಚಾರಕರ ಸಭೆ ಜರುಗಿತು.

ಈ ಸಭೆಯಲ್ಲಿ ಅಫಜಲ್‌ಪುರ ತಾಲೂಕಿನ 157 ಜನ ಸದಸ್ಯರು ಭಾಗವಹಿಸಿದ್ದರು. ಇದರಲ್ಲಿ ಕೆಲವು ಸದಸ್ಯರು 14 ವರ್ಷಗಳಿಂದ 280 ರೂ ನಿಗದಿತ ವೇತನದಲ್ಲಿ ಕೆಲಸ ಮಾಡುತ್ತಿದ್ದವರು. ಅಂಗನವಾಡಿ ನೌಕರರ ವೇತನ ಶ್ರೇಣಿಯನ್ನು ರೂ 1040-1990ಕ್ಕೆ ಮಂಜೂರು ಮಾಡಿಸುವಲ್ಲಿ ಮಾನ್ಪಡೆಯವರ ಹೋರಾಟ ಮತ್ತು ನೇತೃತ್ವವನ್ನು ಶ್ಲಾಘಿಸಿ ಅಂತಹ ಸವಲತ್ತು ಉಳಿದೆಲ್ಲಾ ಅಂಗನವಾಡಿ ನೌಕರರಿಗೂ ದೊರಕುವಂತೆ ಪಣತೊಟ್ಟು ತಾಲೂಕು ಮಟ್ಟದ ಸಂಘಟನೆಗೆ ಕೆಲಕಂಡವರನ್ನು ಪದಾಧಿಕಾರಿಗಳಾಗಿ ಅವಿರೋಧವಾಗಿ ಆಯ್ಕೆ ಮಾಡಿದರು. ಅಧ್ಯಕ್ಷರಾಗಿ ಈಶ್ವರಮ್ಮಾ ಅಫ್‌ಜಲ್‌ಪೂರು, ಉಪಾಧ್ಯಕ್ಷರಾಗಿ ಎಂ.ಲಕ್ಷ್ಮಿ, ಭಾಗಮ್ಮಾ ಅಫ್‌ಜಲ್‌ಪೂರ, ತಿಪ್ಪವ್ವಾ ಚೌಡಾಪೂರುತಾಂಡಾ, ಕಾರ್ಯದರ್ಶಿಯಾಗಿ ಶಾಂತಾ ಎಲ್.ಗಂಟಿ ಅಫ್‌ಜಲ್‌ಪೂರು, ಜಂಟಿ ಕಾರ್ಯದರ್ಶಿಯಾಗಿ ಶಕುಂತಲಾ ಚಾಂದಕವಟೆ, ಸುಮಿತ್ರಾ ಗಾಣಗಾಪೂರ, ಮಲ್ಲಮ್ಮಾ ರೇವೂರ್‌ತಾಂಡಾ, ಸಂಘಟನಾ ಕಾರ್ಯದರ್ಶಿಗಳಾಗಿ ಪಾರ್ವತಿ ದೇ ಗಾಣಗಾಪೂರು ಹಾಗೂ ಅನುಸೂಯ, ಖಜಾಂಚಿಯಾಗಿ ಮೀನಾಕುಮಾರಿ ಗುತ್ತೇದಾರ, ಹಾಗೂ 11ಜನರ ಕಮಿಟಿಯ ಸದಸ್ಯರು ಸೇರಿದಂತೆ ಒಟ್ಟು 21 ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಕಾಂ:ಮಾನ್ಪಡೆಯವರು ಮುಂಬರುವ ರಾಷ್ಟ್ರಮಟ್ಟದ ಅಂಗನವಾಡಿ ಕಾರ್ಯಕರ್ತರ ಸಮ್ಮೇಳನದಲ್ಲಿ ಜಿಲ್ಲೆಯಿಂದ ಅಧಿಕ ಪ್ರಮಾಣದಲ್ಲಿ ಭಾಗವಹಿಸಲು ಕರೆ ಕೊಟ್ಟರು.

ಡಿವೈಎಫ್ಐ ಸುದ್ದಿಗಳು

ಭದ್ರಾವತಿ ತಾಲೂಕು ಸಮಾವೇಶ

ಡಿವೈಎಫ್‌ಐನ 4ನೇ ರಾಜ್ಯ ಹಾಗೂ ರಾಷ್ಟ್ರ ಸಮ್ಮೇಳನದ ಪೂರ್ವಭಾವಿಯಾಗಿ ಭದ್ರಾವತಿತಾಲೂಕು ಸಮಾವೇಶವನ್ನು ಪೆಬ್ರವರಿ 10 ರಂದು ನಡೆಸಲು ನಿರ್ಧರಿಸಲಾಗಿದೆ. ಡಿವೈಎಫ್‌ಐ ದಶಮಾನೋತ್ಸವದ ಅಂಗವಾಗಿ ಸಮೀಪದ ಹೊಸೂರಿನಿಂದ ಶಿವರಾಂನಗರಕ್ಕೆ ಶ್ರಮದಾನದ ಮೂಲಕ ರಸ್ತೆ ನಿರ್ಮಿಸಲು ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಎಂ.ನಾರಾಯಣರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ತಾಲೂಕು ಸಮಿತಿ

ಕೋಮು ಭಾವನೆ ಕೆರಳಿಸಲು ಶಾಲೆಗಳ ಬಳಕೆ

ಕುಂದಾಪುರ

ತಾಲೂಕಿನಾದ್ಯಂತ ಸಾರ್ವಜನಿಕ ಶಾಲೆಗಳಲ್ಲಿ ಹಿಂದೂ ಸೇವಾ ಪ್ರತಿಷ್ಠಾನದ ಹೆಸರಿನಲ್ಲಿ ಹಿಂದೂ ಮತೀಯ ಭಾವನೆಯನ್ನು ಮುಗ್ಧ ಮಕ್ಕಳಲ್ಲಿ ಪ್ರಚಾರ ಮಾಡುತ್ತಿದ್ದು ಎಲ್ಲಾ ಮತೀಯರೂ ವಿದ್ಯಾರ್ಜನೆಗೆಂದು ಬರುವ ಶಾಲೆಗಳಲ್ಲಿ ಕೋಮು ಸಾಮರಸ್ಯ ಕೆಡಿಸುವ ಈ ಕಾರ್ಯಕ್ರಮಕ್ಕೆ ಅವಕಾಶ ಕೊಡಬಾರದೆಂದು ಡಿವೈಎಫ್‌ಐ ತಾಲೂಕು ಸಮಿತಿ ಕುಂದಾಪುರ ಸಹಾಯಕ ವಿದ್ಯಾಧಿಕಾರಿ ಗೆ ಪತ್ರ ಬರೆದು ಕೋರಿದೆ. ಪತ್ರದ ಕಾಪಿಯನ್ನು



ಪೂರ್ವಾರ್ಧದಲ್ಲಿ ಕೆಲವು ಆಶಾದಾಯಕ-ಶಾಂತಿಯುತ ಮನುಕುಲದ ಬೆಳವಣಿಗೆಯತ್ತ-ಬೆಳವಣಿಗೆಗಳನ್ನು ಕಂಡರೆ, ಉತ್ತರಾರ್ಧದಲ್ಲಿ ಕೊಲ್ಲಿ ಬಿಕ್ಕಟ್ಟಿನಿಂದ ಯುದ್ಧದ ಕಾರ್ಮೋಡಗಳು ಆವರಿಸಿ 1990 ರ ಈ ವರ್ಷದಲ್ಲಿ ಎಲ್ಲಾ ಸಕಾರಾತ್ಮಕ ಸಾಧನೆಗಳನ್ನು ನುಂಗುವ ಲಕ್ಷಣಗಳು ಕಂಡು ಬರುತ್ತಿವೆ. ನಾಟೋ ಮತ್ತು ವಾರ್ಸಾ ಬಣದ ನಡುವೆ ಶಸ್ತ್ರಾಸ್ತ್ರ ಕಡಿತ ಒಪ್ಪಂದಗಳು, ನೆಲ್ಸನ್ ಮಂಡೇಲಾ ಬಿಡುಗಡೆ, ನಮೀಬಿಯಾ ಸ್ವತಂತ್ರ ದೇಶವಾಗಿ ಉದಯ, ಸಾಮ್ರಾಜ್ಯಶಾಹಿ ಹುಟ್ಟು ಹಾಕಿದ ಕೆಲವು ಸಂಘರ್ಷಗಳ ಅಂತ್ಯದ ಸಾಧ್ಯತೆ ಅಫ್ಘನಿಸ್ತಾನ-ಕಾಂಬೋಡಿಯಾ ಇತ್ಯಾದಿ, ನೇಪಾಳ, ಬಾಂಗ್ಲಾ ದೇಶದಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳ ವಿಜಯ. ಇವು ಸಕಾರಾತ್ಮಕ ಬೆಳವಣಿಗೆಗಳು. ಪೂರ್ವ ಯುರೋಪಿನ ಬೆಳವಣಿಗೆಗಳಿಂದ ಆರಂಭವಾದ ಹಿನ್ನಡೆಯಿಂದ ಸಮಾಜವಾದಿ ಚಳುವಳಿ ಇನ್ನೂ ಚೇತರಿಸಿಕೊಂಡಿಲ್ಲ. ಚೀನಾ, ಮಂಗೋಲಿಯಾ, ವಿಯಟ್ನಾಂ, ಕ್ಯೂಬಾ, ಕೊರಿಯಾ ಬಿಟ್ಟರೆ ಇತರ ಹೆಚ್ಚಿನ ದೇಶಗಳಲ್ಲಿ ತೀವ್ರ ಬಿಕ್ಕಟ್ಟಿನಲ್ಲಿದೆ. ಸೋವಿಯತ್ ಒಕ್ಕೂಟದಲ್ಲೂ ಸಮಾಜವಾದಿ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತಂದು ಉಚ್ಚಮಟ್ಟಕ್ಕೆ ಒಯ್ಯುವ ಪ್ರಯತ್ನದಲ್ಲಿ ಜನಾಂಗೀಯ ಗಲಭೆಗಳು, ಮಾರುಕಟ್ಟೆ ಅವ್ಯವಸ್ಥೆ ತೀವ್ರ ಸವಾಲು ಒಡ್ಡಿವೆ. ಸಾಮ್ರಾಜ್ಯಶಾಹಿ ಮತ್ತು ಮೂರನೆಯ ಜಗತ್ತಿನ ದೇಶಗಳ ಜೊತೆ ವೈರುಧ್ಯ ತೀವ್ರವಾಗಿ ಮುಂದುವರಿದಿದೆ. ಉರುಗ್ವೇ ಮಾತುಕತೆಗಳು ಮುರಿದು ಹೋಗಿರುವುದು, ಕೊಲ್ಲಿಯಲ್ಲಿ ಅಮೇರಿಕದ ಉದ್ಧಟತನ, ಕೈಲಿನಿ ವಿಟಕಿಯಿಂದ ತತ್ತರಿಸುತ್ತಿರುವುದು ಇತ್ಯಾದಿ, ಪಾಕಿಸ್ತಾನ, ಫಿಲಿಪ್ಪೈನ್ಸ್, ಪನಾಮಾಗಳಲ್ಲಿ

ಸಾಮ್ರಾಜ್ಯಶಾಹಿಯ ಕೈವಾಡ ಅದೇ ಪ್ರಮಾಣದಲ್ಲಿ ಮುಂದುವರಿದಿದೆ. ಒಟ್ಟಾರೆ ಕೆಲವು ಆಶಾದಾಯಕ ಬೆಳವಣಿಗೆಗಳಿದ್ದಾಗ್ಯೂ ಜಗತ್ತಿನ ಬಹುಸಂಖ್ಯಾತ ಜನರು ಬದುಕು ಹಿಂದಿಗಿಂತಲೂ ದುರ್ಭರವಾಗಿದೆ. ಹೆಣ್ಣು ಮಗುವಿನ ವರ್ಷವಾಗಿ ಆಚರಿಸಲಾದ ಈ ವರ್ಷದ ಕೊನೆಯಲ್ಲಿ ಹೆಣ್ಣು ಮಗುವಿನ ಪರಿಸ್ಥಿತಿಯಲ್ಲಿ ಭಾರಿ ಬದಲಾವಣೆಗಳೇನೂ ಆಗಿಲ್ಲ.

ಆಶಾದಾಯಕ ಬೆಳವಣಿಗೆಗಳಿಂದ ಕೊಲ್ಲಿ ಯುದ್ಧದತ್ತ

ವಿಶ್ವಶಾಂತಿ-ಅಂತರ್ರಾಷ್ಟ್ರೀಯ ಸಂಬಂಧಗಳು

ವಿಶ್ವಶಾಂತಿಯ ಸ್ಥಾಪನೆಯತ್ತ ಅಣ್ವಸ್ತ್ರ ಯುದ್ಧದ ಭೀತಿ ಕಡಿಮೆ ಮಾಡುವತ್ತ ಹಲವು ಪ್ರಮುಖ ಹೆಜ್ಜೆಗಳನ್ನು ಇಡಲಾಯಿತು. ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಬಿಗುವು ಸಡಿಲಿಸುವಲ್ಲಿ ಇಂತಹ ಕೆಲವು ಮೈಲಿಗಲ್ಲುಗಳು:-

*ಗೋರ್ಬಚೇವ್-ಬುಶ್ ಶೃಂಗಸಭೆ. ಪ್ರಮುಖ ಪರಮಾಣು ಅಸ್ತ್ರಗಳಲ್ಲಿ ಶೇಕಡಾ50 ಕಡಿತ.(ಜೂನ್)

*ಕೊಲ್ಲಿ ಬಿಕ್ಕಟ್ಟು ಬಗ್ಗೆ ಇನ್ನೊಂದು ಬುಶ್-ಗೋರ್ಬಚೇವ್ ಶೃಂಗಸಭೆ (ಸೆಪ್ಟೆಂಬರ್)

*ನಾಟೋ ಸಭೆ- ಅಣ್ವಸ್ತ್ರಗಳ ಬಳಕೆ ಕೊನೆಯ ಅಸ್ತ್ರವಾಗಿ ಘೋಷಣೆ. ಹಲವು ನೆಲೆಗಳಲ್ಲಿ ಕಡಿತ-ಯುದ್ಧಸಿದ್ಧತೆ ಇಳಿತ(-ಜುಲೈ).

*ಸೋವಿಯತ್-ಜರ್ಮನಿ ಅನಾಕ್ರಮಣ ಒಪ್ಪಂದ(ನವೆಂಬರ್ 18)

*35ಪೂರ್ವ ಪಶ್ಚಿಮ ದೇಶಗಳ ಭದ್ರತೆ-ಸಹಕಾರ ಸಮ್ಮೇಳನ (ನವೆಂಬರ್) -ಅಣ್ವಸ್ತ್ರವಲ್ಲದ ಶಸ್ತ್ರಾಸ್ತ್ರಗಳಲ್ಲಿ ಭಾರಿ ಕಡಿತದ ಒಪ್ಪಂದ.

ಈ ವರ್ಷದ ಇನ್ನೊಂದು ಪ್ರಮುಖ ಬೆಳವಣಿಗೆ ಅಂತರ್ರಾಷ್ಟ್ರೀಯ ಸಂಬಂಧಗಳ ಬಿಕ್ಕಟ್ಟುಗಳ ನಿರ್ವಹಣೆಯಲ್ಲಿ ವಿಶ್ವಸಂಸ್ಥೆ ವಹಿಸುತ್ತಿರುವ ಪ್ರಮುಖ ಪಾತ್ರ. ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಅತ್ಯಂತ ಸಕಾರಾತ್ಮಕ ಬೆಳವಣಿಗೆಯಾದ ಕೊಲ್ಲಿ ಬಿಕ್ಕಟ್ಟಿನಲ್ಲೂ ವಿಶ್ವಸಂಸ್ಥೆ ಪ್ರಮುಖ ಪಾತ್ರ ವಹಿಸುತ್ತಿದೆ. ನಮೀಬಿಯಾದ ಸ್ವಾತಂತ್ರ್ಯದಲ್ಲಿ ವಿಶ್ವಸಂಸ್ಥೆ ವಹಿಸಿದ ಪಾತ್ರ, ಈಗ ಕಾಂಬೋಡಿಯಾದ ಸಂಘರ್ಷ ಕೊನೆಗೊಳಿಸುವಲ್ಲಿ ಅದು ವಹಿಸಲಿರುವ ಪಾತ್ರ ಮುಖ್ಯವಾದುದು. ಪ್ಯಾಲೆಸ್ಟೈನ್ ಸಮಸ್ಯೆಯ ಪರಿಹಾರದಲ್ಲಿ ಮಾತ್ರ ಅದರ ವಿಫಲತೆ ಕಣ್ಣಿಗೆ ಹೊಡೆಯುವಂತಹುದು. ಕೊಲ್ಲಿ ಬಿಕ್ಕಟ್ಟಿನಲ್ಲಿ 12 ನಿರ್ಣಯಗಳೊಂದಿಗೆ ಕಾರ್ಯಾಚರಣೆಗಿಳಿದ ಭದ್ರತಾ ಸಮಿತಿ, ಪ್ಯಾಲೆಸ್ಟೈನ್ ಬಗೆಗಿನ ಅಂತರ್ರಾಷ್ಟ್ರೀಯ ಸಮ್ಮೇಳನದ ನಿರ್ಣಯದ ಬಗ್ಗೆ ಮತದಾನವನ್ನು 7 ಬಾರಿ ಮುಂದೂಡಲಾಯಿತು. ಅಮೇರಿಕ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳು ವಿಶ್ವಸಂಸ್ಥೆಯನ್ನು ಇನ್ನೂ ತಮ್ಮ ಮೂಗಿನ ನೇರಕ್ಕೆ ನಿಯಂತ್ರಿಸಲು ಸಾಧ್ಯವಾಗಿರುವುದು ನಕಾರಾತ್ಮಕ ಅಂಶ. ಶೀತಲ ಸಮರದ ನಾಲ್ಕು ದಶಕಗಳ ನಂತರ ಹೊಸಗಾಳಿ ಬೀಸಲು ಆರಂಭಿಸಿದ ಈ ವರ್ಷದ ಇತರ ಮೈಲಿಗಲ್ಲುಗಳು.

*ಪಿಎಲ್‌ಓ ಜೊತೆ ಅಮೇರಿಕನ್ ಶಾಂತಿ ಮಾತುಕತೆ ಸ್ಥಗಿತ(ಜೂನ್)

*ಇರಾಕ್‌ನಿಂದ ಕುವೈತ್ ಆಕ್ರಮಣ ಮತ್ತುವಶ(ಆಗಸ್ಟ್)

*ವಿಯೆಟ್ನಾಂನ ನಂತರ ಅತಿದೊಡ್ಡ ಅಮೇರಿಕನ್ ಪಡೆಗಳ ಜಮಾವಣೆ ಕೊಲ್ಲಿಯಲ್ಲಿ (ಆಗಸ್ಟ್-ಡಿಸೆಂಬರ್)

*ಇರಾಕ್ ವಿರುದ್ಧ ಆರ್ಥಿಕ ದಿಗ್ಬಂಧನ ಇತ್ಯಾದಿ ಭದ್ರತಾ ಸಮಿತಿಯ ಹಲವು ನಿರ್ಣಯಗಳು(ಆಗಸ್ಟ್-ಡಿಸೆಂಬರ್)

*ಅಮೇರಿಕಾ-ಬ್ರಿಟನ್-ಆಸ್ಟ್ರೇಲಿಯಗಳಲ್ಲಿ ಅಮೇರಿಕಾದ ಕೊಲ್ಲಿ ಯುದ್ಧ ವಿರೋಧಿ ಚಳುವಳಿ (ಅಕ್ಟೋಬರ್)

*ಪೂರ್ವ ಪಶ್ಚಿಮ ಜರ್ಮನಿಗಳ ಐಕ್ಯತೆ(-ಅಕ್ಟೋಬರ್ 3)

*ಐಕ್ಯ ಜರ್ಮನಿ-ಚುನಾವಣೆ ಬಲಪಂಥೀಯರ ವಿಜಯ(ಡಿಸೆಂಬರ್)

*ಬ್ರಿಟನ್‌ನಲ್ಲಿ ರಾಜಕೀಯ ಬಿಕ್ಕಟ್ಟು--ಥ್ಯಾಚರ್ ರಾಜೀನಾಮೆ(ಡಿಸೆಂಬರ್)

*ಇರಾಕ್ ಮೇಲೆ ಬಲಪ್ರಯೋಗಕ್ಕೆ ಅನುಮತಿ ನೀಡುವ ಭದ್ರತಾ ಸಮಿತಿ ನಿರ್ಣಯ (ಡಿಸೆಂಬರ್)



ಸಮಾಜವಾದ-ಪುನರ್ನವೀಕರಣಕ್ಕಾಗಿ ಹೋರಾಟ

ಕಳೆದ ವರ್ಷದ ಅಲ್ಲೋಲ ಕಲ್ಲೋಲ ಮಾಡುವ ಪೂರ್ವ ಯೂರೋಪಿನ ಬೆಳವಣಿಗೆಗಳಲ್ಲಿ ಸಮಾಜವಾದಕ್ಕಾದ ಹಿನ್ನಡೆಯ ನಂತರ ಹಲವು ದೇಶಗಳಲ್ಲಿ ಆಚರಣೆಯಲ್ಲಿದ್ದ ಸಮಾಜವಾದಿ ಮಾದರಿಗಳಲ್ಲಿದ್ದ ನ್ಯೂನತೆಗಳನ್ನು ನಿವಾರಿಸಿ, ಸಮಾಜವಾದದ ಪುನರ್ನವೀಕರಣಕ್ಕಾಗಿ ಹೋರಾಟ ಈ ವರ್ಷದ ಪ್ರಮುಖ ಬೆಳವಣಿಗೆ.ಇದು ಪೂರ್ವ ಯೂರೋಪಿನ ದೇಶಗಳಲ್ಲೂ, ಸೋವಿಯತ್ ಒಕ್ಕೂಟದಲ್ಲೂ ನಡೆದಿದ್ದು, ಹಲವು ಹಿಂಜರಿತಗಳನ್ನು ಅನುಭವಿಸಿದ್ದರೂ ಮುಂದುವರಿಯುತ್ತಿದೆ. ಪೂರ್ವಯೂರೋಪಿನ ಹಲವು ದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು (ಹೆಸರು ಮತ್ತು ಸಂರಚನೆ ಬದಲಾಯಿಸಿಕೊಂಡು) ಚುನಾವಣೆಗಳಲ್ಲಿ ಸೋತಿವೆ. ಜೆಕೋಸ್ಲೊವಾಕಿಯಾ, ಪೋಲೆಂಡ್, ಹಂಗರಿ ಮತ್ತು ಪೂರ್ವ ಜರ್ಮನಿಗಳಲ್ಲಿ ಸೋಲು ಅನುಭವಿಸಿದ್ದರೂ ಒಂದು ರಾಜಕೀಯ ಶಕ್ತಿಯಾಗಿ ಉಳಿದಿವೆ. ಈ ದೇಶಗಳಲ್ಲಿ ಬಂಡವಾಳಶಾಹಿ ಪುನಃಸ್ಥಾಪಿಸಲು ಪ್ರಯತ್ನಿಸುತ್ತಿರುವ ಬಲಪಂಥೀಯ ಶಕ್ತಿಗಳು ಗೆದ್ದಿದ್ದು, ಸಮಾಜವಾದಿ ಶಕ್ತಿಗಳನ್ನು ರಾಜಕೀಯವಾಗಿ ಮುಗಿಸಲು ಪಕ್ಷದ ಮೇಲೆ ದಮನ, ಆಸ್ತಿ ಮುಟ್ಟುಗೋಲು ಮುಂತಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ. ಈ ಪ್ರಯತ್ನದಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮ ಪ್ರಚಾರಯಂತ್ರ ಇತ್ಯಾದಿಗಳನ್ನು ಉಪಯೋಗಿಸಿ ಮಧ್ಯ ಪ್ರವೇಶಿಸುತ್ತಿವೆ. ಇಲ್ಲಿನ ಸಮಾಜವಾದಿ ಶಕ್ತಿಗಳು ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿ ತಮ್ಮ ಹೋರಾಟ ನಡೆಸುತ್ತಿವೆ. ಬಲ್ಗೇರಿಯಾದಲ್ಲಿ ಸಮಾಜವಾದಿ ಶಕ್ತಿಗಳು ಜಯಗಳಿಸಿದ್ದರೂ, ಅದು ಸರಕಾರ ನಡೆಸದಂತೆ ಬಲಪಂಥೀಯ ಶಕ್ತಿಗಳು ತಡೆಗೆ ಯತ್ನಿಸುತ್ತಿವೆ. ರುಮೇನಿಯಾದಲ್ಲಿ ಮಾಜಿ ಕಮ್ಯುನಿಸ್ಟರು ಇರುವ ಆಳುವ ಪಕ್ಷಕ್ಕೂ ಇದೇ ರೀತಿ ಉಪಟಳ ಕೊಡಲಾಗುತ್ತಿದೆ. ಪೂರ್ವಜರ್ಮನಿಯಲ್ಲಿ ಬಲಪಂಥೀಯ ಶಕ್ತಿಗಳ ವಿಜಯದ ನಂತರ ಆ ಶಕ್ತಿಗಳು ಜರ್ಮನ್ ಐಕ್ಯತೆ ಅವರಿಗೆ ಅನುಕೂಲಕರವಾದ ಪರಿಸ್ಥಿತಿಯಲ್ಲಿ ಸಾಧಿಸಿವೆ. ಐಕ್ಯ ಜರ್ಮನ್ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಹೊಸ ಹೆಸರಿನೊಂದಿಗೆ ಒಂದು ಸಣ್ಣದಾದರೂ ಗಮನಾರ್ಹ ಶಕ್ತಿಯಾಗಿ ಉಳಿದಿದೆ. ಎಲ್ಲಾ ದೇಶಗಳಲ್ಲೂ ಜನರ ಒಲವು ಮತ್ತೆ ಗಳಿಸಲು ಎಡಪಕ್ಷಗಳು ಪ್ರಯತ್ನಿಸುತ್ತಿವೆ.

ಸೋವಿಯತ್ ಒಕ್ಕೂಟದಲ್ಲಿ ಈ ಹೋರಾಟ ಕಮ್ಯುನಿಸ್ಟ್ ಪಕ್ಷದೊಳಗೆ ತೀವ್ರವಾಗಿ ನಡೆದಿದೆ. ಮೂರು ಕಾರ್ಯಕ್ರಮಗಳ ನಡುವೆ ತೀವ್ರ ಸಂಘರ್ಷದ ನಂತರ ಪಕ್ಷದ 28 ನೇ ಮಹಾಧಿವೇಶನ ಗೋರ್ಬಚೇವ್ ನಾಯಕತ್ವದ ಕಾರ್ಯಕ್ರಮ ಅಂಗೀಕರಿಸಿತು. ಪಕ್ಷದ ಹೆಚ್ಚಿನ ಸದಸ್ಯತ್ವವನ್ನು ಈ ಹಾದಿಗೆ ಗೆದ್ದುಕೊಳ್ಳಲು ನಾಯಕತ್ವಕ್ಕೆ ಸಾಧ್ಯವಾಯಿತು. ಆರ್ಥಿಕ ಸುಧಾರಣೆಗಳನ್ನು ತರುವಲ್ಲಿ ಮಾರುಕಟ್ಟೆ ಆರ್ಥಿಕತೆ ಜಾರಿಗೆ ತರುವ ಯೋಜನೆಗಳನ್ನು ರೂಪಿಸುವಲ್ಲೂ ಸಾಕಷ್ಟು ರಾಷ್ಟ್ರೀಯ ಚರ್ಚೆಯ ನಂತರ ನಿರ್ಧರಿಸಲಾಗಿದೆ. ಜನಾಂಗೀಯ ಸಮಸ್ಯೆಯನ್ನು ಬಗೆಹರಿಸುವತ್ತ ಹೊಸ ಒಕ್ಕೂಟದ ಒಪ್ಪಂದದ ಕರಡು ಇದೇ ರೀತಿ ಚರ್ಚೆಗಿಡಲಾಗಿದೆ. ಒಕ್ಕೂಟದಲ್ಲಿ ಬಿಗಡಾಯಿಸುತ್ತಿರುವ ಕಾನೂನು ವ್ಯವಸ್ಥೆಯನ್ನು ಬಲಪಡಿಸಲು ರಾಜಕೀಯ ಸಂರಚನೆಯಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡಲಾಗುತ್ತಿದೆ. ಒಟ್ಟಾರೆ ದೇಶದ ಆಗು ಹೋಗುಗಳಲ್ಲಿ ಪ್ರಮುಖ ರಾಜಕೀಯ ಶಕ್ತಿಯ ಸ್ಥಾನವನ್ನು ಕಮ್ಯುನಿಸ್ಟ್ ಪಕ್ಷ ಉಳಿಸಿಕೊಂಡು ಭದ್ರಪಡಿಸಿಕೊಂಡಿದೆ. ಉಳಿದ ಶಕ್ತಿಗಳನ್ನು ರಾಜಕೀಯವಾಗಿ ಎದುರಿಸಲು ಶಕ್ತವಾಗಿದೆ.

ಚೀನಾ ಕಳೆದ ತಿಯಾನೆನ್ಮನ್ ಚೌಕದ ಘಟನೆಗಳ ನಂತರ ಸಾಮ್ರಾಜ್ಯಶಾಹಿ ದಿಗ್ಬಂಧನವನ್ನು ಎದುರಿಸಿ ತನ್ನ ಆರ್ಥಿಕ ಸುಧಾರಣೆಗಳನ್ನು ಮುಂದುವರಿಸಿದೆ. ಏಷ್ಯಾಡ್ ಕ್ರೀಡೆಗಳನ್ನು ಬೀಜಿಂಗ್‌ನಲ್ಲಿ ನಡೆಸಿ, ದೊಡ್ಡ ಕ್ರೀಡಾಶಕ್ತಿಯಾಗಿ ಮುಂದೆ ಬಂದಿದೆ. ಹೆಚ್ಚಿನ ಪಾಶ್ಚಿಮಾತ್ಯ ದೇಶಗಳು ಚೀನಾದ ವಿರುದ್ಧ ವಿಧಿಸಿದ್ದ ದಿಗ್ಬಂಧನದ ನಿಷೇಧ ವಾಪಸು ತೆಗೆದುಕೊಂಡಿವೆ.

ಕೆಲವು ಪ್ರಮುಖ ಮೈಲಿಗಲ್ಲುಗಳು

*ಚೀನಾ ಪ್ರಧಾನಿಯ ಸೋವಿಯತ್ ಭೇಟಿ(ಏಪ್ರಿಲ್)

*ರುಮೇನಿಯಾದಲ್ಲಿ ರಾಷ್ಟ್ರೀಯ ಮುಕ್ತಿರಂಗಕ್ಕೆ ವಿಜಯ (ಜೂನ್)

*ಬಲ್ಗೇರಿಯಾ-ಸೋಶಲಿಸ್ಟ್ ಪಕ್ಷಕ್ಕೆ ಜಯ (ಜೂನ್)

*ಜೆಕೊಸ್ಲೊವಾಕಿಯಾ-ಬಲಪಂಥೀಯ ಶಕ್ತಿಗಳ ಜಯ (ಜೂನ್)

*ರುಮೇನಿಯಾದಲ್ಲಿ ವಿರೋಧ ಪಕ್ಷಗಳ ಗಲಭೆ (ಜೂನ್)

*28 ನೇ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನ (ಜುಲೈ2-9)

*ಮಂಗೋಲಿಯಾದಲ್ಲಿ ಕಮ್ಯುನಿಸ್ಟರ ಜಯ (ಜುಲೈ)

*ಜರ್ಮನ್-ಸೋವಿಯತ್ ಒಪ್ಪಂದ (ಜುಲೈ 17)

*ಪೂರ್ವ-ಪಶ್ಚಿಮ ಜರ್ಮನ್ ಆರ್ಥಿಕ ಐಕ್ಯತೆ (ಜುಲೈ 15)

*ಗೋರ್ಬಚೇವ್ ಯೋಜನೆ- ಮಾರುಕಟ್ಟೆ ಆರ್ಥಿಕತೆ ಬಗ್ಗೆ ಅಂಗೀಕೃತ (ಅಕ್ಟೋಬರ್)

*ಲಿಥುವೇನಿಯಾ, ಲಾಟವಿಯಾ, ಎಸ್ಟೋನಿಯಾಗಳಿಂದ ಸಾರ್ವಭೌಮತ್ವ ಘೋಷಣೆ.

ಸಾಮ್ರಾಜ್ಯಶಾಹಿ- ವಿರೋಧಿ ಹೋರಾಟದಲ್ಲಿ ಮುನ್ನಡೆ.

ಸಾಮ್ರಾಜ್ಯಶಾಹಿ ಮತ್ತು ಮೂರನೆಯ ಜಗತ್ತಿನ ದೇಶಗಳ ನಡುವೆ ವೈರುಧ್ಯಗಳು ತೀವ್ರವಾಗುತ್ತಿದ್ದು ತನ್ನ ವಿರೋಧಿಗಳನ್ನು ಬುಡಮೇಲು ಮಾಡಲು ಮಧ್ಯಪ್ರವೇಶ, ಪರೋಕ್ಷ ಕೈವಾಡಗಳನ್ನು ಮುಂದುವರೆಸಿದೆ. ನಮೀಬಿಯಾದ ಸ್ವಾತಂತ್ರ್ಯ, ಮಂಡೇಲಾ ಬಿಡುಗಡೆ, ಎಎನ್‌ಸಿಯ ನಿಷೇಧ ರದ್ದು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಪ್ರಮುಖ ಸಾಧನೆಗಳು. ಇದನ್ನು ಬದಲಾಯಿಸಲು ಅದು ಶತ ಪ್ರಯತ್ನ ಮಾಡುತ್ತಿದೆ. ನಿಕರಾಗುವಾದಲ್ಲಿ ಸ್ಯಾಂಡಿನಿಸ್ತಾ ಸೋಲಿನಲ್ಲಿ, ಮಧ್ಯ ಏಷ್ಯಾದ, ಆಫ್ರಿಕಾ, ದ.ಅಮೇರಿಕಾದ ಹಲವು ದೇಶಗಳಲ್ಲಿ ಅದರ ಪ್ರತ್ಯಕ್ಷ ಪರೋಕ್ಷ ಕೈವಾಡ ಇದೆ. ಮೂರನೆಯ ಜಗತ್ತಿನ ದೇಶಗಳಲ್ಲಿ ಸಾಮ್ರಾಜ್ಯಶಾಹಿ ಪರ ಸರ್ವಾಧಿಕಾರಗಳನ್ನು ಕಿತ್ತು ಹಾಕಿ ಪ್ರಜಾಸತ್ತೆ ಸ್ಥಾಪಿಸುವ ಪ್ರಕ್ರಿಯೆ ಬಲಗೊಳ್ಳುತ್ತಿದೆ. ನೇಪಾಳ, ಬಾಂಗ್ಲಾದೇಶ ಇದಕ್ಕೆ ಉದಾಹರಣೆ. ಮೂರನೆಯ ಜಗತ್ತಿನ ವಿದ್ಯಮಾನಗಳ ಕೆಲವು ಮೈಲಿಗಲ್ಲುಗಳು.

*ನೆಲ್ಸನ್ ಮಂಡೇಲಾ ಬಿಡುಗಡೆ(ಫೆ-11)

*ನಿಕರಾಗುವಾ ಚುನಾವಣೆ-ಸ್ಯಾಂಡಿನಿಸ್ತಾ ಸೋಲು(ಫೆ-25)

*ನಮೀಬಿಯಾ ಸ್ವಾತಂತ್ರ್ಯ (ಮಾರ್ಚ್-21)

*ಅಫ್ಘನ್ ಕ್ಷಿಪ್ರ ಕ್ರಾಂತಿ ವಿಫಲ(-ಮಾರ್ಚ್)

*ನೇಪಾಳದಲ್ಲಿ ಪಂಚಾಯತ್ ಸರ್ಕಾರ ಪತನ(ಏಪ್ರಿಲ್-8)

*ಬರ್ಮಾದಲ್ಲಿ ಚುನಾವಣೆ - ವಿರೋಧ ಪಕ್ಷಗಳ ವಿಜಯ (ಜೂನ್)

*ನೆಲ್ಸನ್ ಮಂಡೇಲಾ-ಯೂರೋಪ ಅಮೇರಿಕಾ ಭೇಟಿ(ಜೂನ್)

*ಪಾಕಿಸ್ತಾದ ಸಿಂಧ್‌ನಲ್ಲಿ ಕೋಮು ಗಲಭೆಗಳು (ಜೂನ್)

*ಕಾಂಬೋಡಿಯಾದಲ್ಲಿ ಗೆರಿಲ್ಲಾ ಒಕ್ಕೂಟಕ್ಕೆ ಅಮೇರಿಕನ್ ಬೆಂಬಲ ವಾಪಸು (ಆಗಸ್ಟ್)

*ಬೆನಜೀರ್ ಸರ್ಕಾರ ವಜಾ(ಆಗಸ್ಟ್)

*ಎಎನ್‌ಸಿ ಸಶಸ್ತ್ರ ಹೋರಾಟ ಸ್ಥಗಿತ (ಆಗಸ್ಟ್)

*ಕೋರಿಯಾಐಕ್ಯತೆಗಾಗಿ-ಪ್ರಧಾನಿಗಳ ಭೇಟಿ(ಸೆಪ್ಟೆಂಬರ್)

*ಅಕ್ವಿನೋ ವಿರುದ್ಧ ಮಿಲಿಟರಿ ದಂಗೆಯ ಪಿತೂರಿ(ಅಕ್ಟೋಬರ್)

*ಮಂಡೇಲಾ ಭಾರತ ಭೇಟಿ(ಅಕ್ಟೋಬರ್ 19)

*ಪ್ಯಾಲೆಸ್ತೀನರ ನರಮೇಧ (ಅಕ್ಟೋಬರ್)

*ಈಜಿಪ್ಟ್ ಸ್ಪೀಕರ್ ಕೊಲೆ (ಅಕ್ಟೋಬರ್)

*ಪಾಕಿಸ್ತಾನ ಚುನಾವಣೆ ಬೆನಜೀರ್ ಸೋಲು(ನವೆಂಬರ್)

*ಲೆಬನಾನ್ ಮೇಲೆ ಸಿರಿಯಾ ಆಕ್ರಮಣ (ನವೆಂಬರ್)

*ಸಾರ್ಕ್ ಸಮ್ಮೇಳನ (ನವೆಂಬರ್)

*ಬಾಂಗ್ಲಾದೇಶದಲ್ಲಿ ಮಿಲಿಟರಿ ಆಡಳಿತ ಕೊನೆ (ಡಿಸೆಂಬರ್)

*ಎಲ್‌ಟಿಟಿಇ-ಶ್ರೀಲಂಕಾ ಭದ್ರತಾ ಪಡೆಗಳ ನಡುವೆ ಕದನ

*ಯೆಮೆನ್ ಐಕ್ಯತೆ

*ಕಾಂಬೋಡಿಯಾ ಶಾಂತಿ ಸ್ಥಾಪನೆಗೆ ವಿಶ್ವಸಂಸ್ಥೆ ಯೋಜನೆ.

KRNM/BGW-293 M AG (2) PRB DECR 319-78/79

ಮಹಿಳಾ ನೌಕರರ ವಿರುದ್ಧ ಪಕ್ಷಪಾತಕ್ಕೆ ಖಂಡನೆ

ಡಿಸೆಂಬರ್ 19,1990 ರಂದು ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರ ಅಖಿಲ ಭಾರತ ಸಮಾವೇಶ ಏರ್ ಹೋಸ್ಟೆಸ್‌ಗಳನ್ನು ಕುರಿತಂತೆ ಏರ್-ಇಂಡಿಯಾ, ಇಂಡಿಯನ್ ಏರ್‌ಲೈನ್ಸ್ ಮ್ಯಾನೇಜ್‌ಮೆಂಟ್‌ಗಳ ಪಕ್ಷಪಾತದ ವರ್ತನೆಯನ್ನು ತೀವ್ರವಾಗಿ ಖಂಡಿಸುತ್ತಾ ಎಲ್ಲಾ ಕಾರ್ಮಿಕ ಸಂಘಗಳು ಜನವರಿ 5, 1991 ರಂದು ನಾಗರಿಕ ವಿಮಾನ ಸಂಚಾರ ಇಲಾಖೆಗೆ ಪ್ರತಿಭಟನಾ ಟೆಲಿಗ್ರಾಂ ಕಳಿಸಬೇಕೆಂದು ಕರೆ ನೀಡಿದೆ.

ಇತರ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲೂ ಮಹಿಳಾ ಕಾರ್ಮಿಕರ ವಿರುದ್ಧ ನಡೆಯುತ್ತಿರುವ ಪಕ್ಷಪಾತಗಳನ್ನು ಈ ಸಮಾವೇಶ ಪರಿಶೀಲಿಸಿ ಇದಕ್ಕಾಗಿ ದೇಶವ್ಯಾಪಿ ಆಂದೋಲನ ಆರಂಭಿಸಬೇಕೆಂದು ನಿರ್ಧರಿಸಿತು.

ದುಡಿಯುವ ಮಹಿಳೆಯರ ಅಖಿಲ ಭಾರತ ಸಮನ್ವಯ ಸಮಿತಿಯ ಸಂಯೋಜಕಿ ಕಾಂ: ವಿಮಲಾ ರಣದಿವೆ ಉದ್ಘಾಟಿಸಿದ ಈ ಸಮಾವೇಶದಲ್ಲಿ ಎಲ್ಲಾ ಪ್ರಮುಖ ಉದ್ದಿಮೆಗಳಿಂದ 75 ಪ್ರತಿನಿಧಿಗಳು ಭಾಗವಹಿಸಿದರು. ಬೆಂಗಳೂರಿನ ಖುರ್ಷಿದಾ ಬೇಗಂ ಸೇರಿದಂತೆ 7 ಪ್ರಮುಖ ಸಂಘಟನೆಗಳ ಪ್ರತಿನಿಧಿಗಳ ಅಧ್ಯಕ್ಷ ಮಂಡಳಿ ಸಮಾವೇಶವನ್ನು ನಡೆಸಿಕೊಟ್ಟಿತು. ಒಟ್ಟು 20 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು.

ಸಾರ್ವಜನಿಕ ಕ್ಷೇತ್ರದ ಸಂಘಗಳು ಮಹಿಳೆಯರ ಸಮಸ್ಯೆಗಳನ್ನು ಶ್ರದ್ಧೆಯಿಂದ ಕೈಗೆತ್ತಿಕೊಳ್ಳಬೇಕು, ದುಡಿಯುವ ಮಹಿಳೆಯರ ದೇಶವ್ಯಾಪಿ ಆಂದೋಲನವಿಲ್ಲದೆ ಪಕ್ಷಪಾತವನ್ನು ಎದುರಿಸುವುದು ಸಾಧ್ಯವಿಲ್ಲ ಎಂದು ಕಾಂ: ವಿಮಲಾ ರಣದಿವೆ ಹೇಳಿದರು.

> **ದೇಶವ್ಯಾಪಿ ಕ್ರೋಢೀಕೃತ ಆಂದೋಲನವಿಲ್ಲದೆ ಪಕ್ಷಪಾತವನ್ನು ಎದುರಿಸುವುದು' ಸಮಾನತೆಯ ಸ್ಥಾನಮಾನ ಪಡೆಯಲು ಸಾಧ್ಯವಿಲ್ಲ**

ಸಿ.ಐ.ಟಿ.ಯು. ಕಾರ್ಯದರ್ಶಿ ಎಂ.ಕೆ.-ಪಂಧೆಯವರು ದುಡಿಯುವ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಒಂದು ವ್ಯಾಪಕ ವರದಿ ಸಲ್ಲಿಸುತ್ತಾ ಪಕ್ಷಪಾತದ ಹಲವಾರು ಉದಾಹರಣೆಗಳನ್ನು ನೀಡಿದರು. ಏರ್ ಹೋಸ್ಟೆಸ್‌ಗಳ(ಗಗನ ಸಖಿಯರು), ಕಬ್ಬಿಣ-ಉಕ್ಕು ಉದ್ದಿಮೆಗಳಲ್ಲಿ ನರ್ಸುಗಳ(ದಾದಿಯರು) ಆಂದೋಲನದ ಬೆಳವಣಿಗೆಗಳ ಬಗ್ಗೆ, ವಿಮಾ ಉದ್ದಿಮೆಯಲ್ಲೂ ಮಹಿಳೆಯರ ಚಟುವಟಿಕೆಗಳ ಬಗ್ಗೆ ವಿವರಿಸುತ್ತಾ ಈ ಹೋರಾಟವನ್ನು ಎಲ್ಲಾ ಸಾರ್ವಜನಿಕ ಉದ್ದಿಮೆಗಳಿಗೆ ವಿಸ್ತರಿಸಿ ವಿವಿಧ ಉದ್ದಿಮೆಗಳ ದುಡಿಯುವ ಮಹಿಳೆಯರ ನಡುವೆ ಪರಸ್ಪರ ಸೌಹಾರ್ದ ಬೆಳೆಸಬೇಕು ಎಂದು ಸೂಚಿಸಿದರು. ಇಡೀ ಸಾರ್ವಜನಿಕ ಕ್ಷೇತ್ರದಲ್ಲಿ ಮಹಿಳೆಯರ ಸಂಖ್ಯೆ ಕೇವಲ 6 ಎಂಬ ಸಂಗತಿಯತ್ತ ಅವರು ಗಮನ ಸೆಳೆದರು.

ಸಮಾರೋಪ ಭಾಷಣ ಮಾಡಿದ ಕಾಂ: ಅಹಲ್ಯಾ ರಂಗ್ನೇಕರ್ ದುಡಿಯುವ ಮಹಿಳೆಯರ ಬಗ್ಗೆ ಕೇಂದ್ರ ಸರ್ಕಾರದ ಧೋರಣೆಯನ್ನು ಟೀಕಿಸುತ್ತಾ ಒಂದು ಕ್ರೋಢೀಕೃತ ಹೋರಾಟವಿಲ್ಲದೆ ಮಹಿಳೆಯರು ಸಮಾನತೆಯ ಸ್ಥಾನ ಮಾನ ಪಡೆಯಲು ಸಾಧ್ಯವಿಲ್ಲ ಎಂದರು. ಸಮಾವೇಶದಲ್ಲಿ ಪ್ರತಿನಿಧಿಗಳು ಸ್ಫೂರ್ತಿಯಿಂದ ಭಾಗವಹಿಸಿದುದನ್ನು ಮೆಚ್ಚಿಕೊಳ್ಳುತ್ತಾ ಸಾರ್ವಜನಿಕ ಉದ್ದಿಮೆಗಳಲ್ಲಿ ದುಡಿಯುವ ಮಹಿಳೆಯರ ಆಂದೋಲನ ಬಲಗೊಳ್ಳಲು ಈ ಸಮಾವೇಶ ನೆರವಾಗುವುದೆಂದು ಆಶಿಸಿದರು.

ಜನವರಿ 5-6 ರಂದು ಅಂಗನವಾಡಿ ಕಾರ್ಯಕರ್ತೆಯರ ಅಖಿಲ ಭಾರತ ಸಮಾವೇಶ

ಕಳೆದ ತಿಂಗಳು ನಡೆಯಬೇಕಿದ್ದ ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರ ಸಮಾವೇಶ ಜನವರಿ 5 ಹಾಗೂ 6 ರಂದು ರಾಜಾಸ್ಥಾನದ ಉದಯಪುರದಲ್ಲಿ ನಡೆಯಲಿದೆ. ನಮ್ಮ ರಾಜ್ಯದಿಂದ ಸುಮಾರು 20 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಲಿದ್ದಾರೆ.

ಮಾರ್ಚ್ 15 ರ ಕರೆ

(ಪುಟ 1ರಿಂದ)

ಸುತ್ತ ಹೋರಾಟ ರೂಪಿಸಿ ಬಲಪಡಿಸಲು ಸಮ್ಮೇಳನ ನಿರ್ಧರಿಸಿತು.

ಕೋಮುವಾದದ ವಿರುದ್ಧ

ಕೋಮುವಾದದ ಕುರಿತು ಅಂಗೀಕರಿಸಿದ ನಿರ್ಣಯದಲ್ಲಿ ಸಮ್ಮೇಳನ ಕೋಮುವಾದಿ ಶಕ್ತಿಗಳ ವಿರುದ್ಧ ಸಂಯುಕ್ತ ಹೋರಾಟ ನಡೆಸಲು, ತಮ್ಮ ದುಡಿಮೆಯ ಜಾಗದಲ್ಲೂ ಹಾಗೂ ಹೊರಗೂ ಎಲ್ಲಾ ದುಡಿಯುವ ಜನರ ಐಕ್ಯತೆಯ ಭಾವನೆ ಬೆಳೆಸಲು ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕ ಸಂಘಗಳಿಗೆ ಕರೆ ನೀಡಿದೆ. ಏಕೆಂದರೆ ಸದ್ಯದ ಕೋಮುಗಲಭೆಗಳು ಕಾರ್ಮಿಕ ಸಂಘಗಳಲ್ಲೂ ಹೊಕ್ಕು ಕೋಮುವಾದದ ವಿರುದ್ಧ ಐಕ್ಯವೇದಿಕೆ ನಿರ್ಮಿಸುವಲ್ಲಿ ಅಡ್ಡಿ ಉಂಟು ಮಾಡುತ್ತಿವೆ. ಇದು ಕಾರ್ಮಿಕ ವರ್ಗದ ಹಿತಾಸಕ್ತಿಗೂ ಬಾಧಕವಾಗುವ ವಿಷಯ ಎಂದಿರುವ ಸಮ್ಮೇಳನ ಎಡ ಮತ್ತು ಜಾತ್ಯಾತೀತ ಶಕ್ತಿಗಳ ಮರು ಹೊಂದಾಣಿಕೆ ನಡೆಸುತ್ತಿರುವುದನ್ನು ಸ್ವಾಗತಿಸುತ್ತಾ ಕಾರ್ಮಿಕ ಆಂದೋಲನವೂ ಈ ಮರು ಹೊಂದಾಣಿಕೆಯನ್ನು ಬಲಪಡಿಸಲು ಕಾರ್ಯಪ್ರವೃತ್ತರಾಗಬೇಕು ಎಂದು ಕರೆ ನೀಡಿದೆ.

ಬಿ.ಟಿ.ಆರ್.ಗೆ ಶ್ರದ್ಧಾಂಜಲಿ

ಸಮ್ಮೇಳನ ಆರಂಭದಲ್ಲಿ ಸಿ.ಐ.ಟಿ.ಯು. ಸಂಸ್ಥಾಪಕ ಅಧ್ಯಕ್ಷ ಕಾಂ: ಬಿ.ಟಿ.ರಣದಿವೆ ಹಾಗೂ ಉಪಾಧ್ಯಕ್ಷ ಕಾ: ಮಹ್ಮದ್ ಇಸ್ಮಾಯಿಲ್ ರವರಿಗೆ ಶ್ರದ್ಧಾಂಜಲಿ ಅರ್ಪಿಸಿತು. ನಮ್ಮ ದೇಶದ ಕಾರ್ಮಿಕ ವರ್ಗದ ಆಂದೋಲನದ ಮಹಾನ್‌ಶಿಲ್ಪಿ ಬಿ.ಟಿ.ಆರ್.ರವರನ್ನು ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕ ಆಂದೋಲನದೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದರು ಎಂದು ಈ ಬಗ್ಗೆ ಸಮ್ಮೇಳನ ಅಂಗೀಕರಿಸಿದ ಇನ್ನೊಂದು ನಿರ್ಣಯದಲ್ಲಿ ನೆನಪಿಸಿಕೊಳ್ಳಲಾಯಿತು. ಐಕ್ಯತೆ ಮತ್ತು ಕಾರ್ಯಾಚರಣೆಯ ನಿಲುವು ತಳೆಯಬೇಕೆಂಬ ಬಗ್ಗೆ ಅವರು ಸತತವಾಗಿ ನೀಡಿದ ಮಾರ್ಗದರ್ಶನ ಸಿ.ಪಿ.ಎಸ್.ಟಿಯು.(ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ)-ನಂತಹ ವಿಶಾಲ ವೇದಿಕೆ ಆರಂಭಗೊಂಡು ಸರ್ವತೋಮುಖ ಹೋರಾಟ ಬೆಳೆದು ಬರಲು ಅವಕಾಶವಾಯಿತು ಎಂದು ನೆನಪಿಸಿಕೊಂಡಿದೆ ಈ ನಿರ್ಣಯ.

ಈ ವಾರ

★ ಸಂಸತ್ತಿನ ಚಳಿಗಾಲದ ಅಧಿವೇಶನಕ್ಕೆ ಇನ್ನೂ ಕೆಲವೇ ದಿನಗಳು ಬಾಕಿಯಿರುವಾಗ ಚಂದ್ರಶೇಖರ್ ಸರಕಾರ ಭಾರಿ ಪ್ರಮಾಣ ಪರೋಕ್ಷ ತೆರಿಗೆ ಹೇರಿದೆ. ಅಬ್ಕಾರಿ ಮತ್ತು ಕಸ್ಟಮ್ಸ್ ತೆರಿಗೆಗಳ ಮೂಲಕ 1340 ಕೋಟಿ ರೂ.ಗಳಷ್ಟು ಭಾರಿ ಮೊತ್ತವನ್ನು ಸಂಗ್ರಹಿಸಲು ಹೊಸ ಪ್ರಸ್ತಾಪಗಳು ಅವಕಾಶ ನೀಡುತ್ತವೆ. ಇದು 225 6 ಕೋಟಿ ರೂ. ಸಂಗ್ರಹಕ್ಕಾಗಿ ಮಧು ದಂಡವತೆ ಮುಂದಿಟ್ಟು ಪೂರ್ಣ ಪ್ರಮಾಣದ ಬಜೆಟ್‌ನಲ್ಲಿರುವುದಕ್ಕಿಂತ ಹೆಚ್ಚಿನ ಮೊತ್ತವಾಗಿದೆ.

............ಈ ಬಜೆಟ್‌ನಿಂದ ಹೊರತಾದ ಹೊರೆ ಈಗಾಗಲೇ ಎರಡಂಕಿ ದಾಟಿರುವ ಹಣದುಬ್ಬರವನ್ನು ಹೆಚ್ಚಿಸುತ್ತದೆ. ಮಾತ್ರವಲ್ಲ ಬೆಲೆಗಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಮತ್ತು ಪ್ರತಿಕೂಲ ಫಲಿತಾಂಶವೂ ಅದರಿಂದ ಹೊರಹೊಮ್ಮುತ್ತದೆ.

-'ಹಿಂದೂಸ್ತಾನ್ ಟೈಮ್ಸ್' ಡಿ.19

★ ಜನರ ಮೇಲೆ ಈಗ ಹೊರಿಸಲಾಗಿರುವ ಹೊರೆ ವರ್ಷಕ್ಕೆ ಸುಮಾರು 1340 ಕೋಟಿ ರೂಪಾಯಿಗಳಷ್ಟಾಗಬಹುದೆಂದು ಅದಾಜಿದ್ದರೂ ವಾಸ್ತವವಾಗಿ ಆ ಪ್ರಮಾಣ 2000 ಕೋಟಿ ರೂ.ಗಳಾಗಬಹುದೆಂದು ತಜ್ಞರ ಅನಿಸಿಕೆ.

ಆದರೆ ಜನಸಾಮಾನ್ಯರಿಗೆ ಇಷ್ಟು ಪ್ರಮಾಣದ ಹೊರೆಯನ್ನು ಹೊರುವ ಶಕ್ತಿ ತುಂಬುವಂಥ ಯಾವುದೇ ನೀತಿಯನ್ನು ಸರಕಾರ ಕೈಗೊಂಡಿಲ್ಲ.

-'ಕನ್ನಡ ಪ್ರಭ' ಡಿ.19

★ ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ(ಐಎಂಎಫ್) ನೆರವನ್ನು ಪಡೆಯುವ ಬಗ್ಗೆ ಹಣಕಾಸು ಸಚಿವ ಯಶವಂತ ಸಿನ್ಹಾ ಕೊನೆಗೂ ಹೇಳಿಕೆ ನೀಡಿದ್ದಾರೆ. ಆದರೆ ಅದೇ ವಿಚಾರದಲ್ಲಿ, ಅದರಲ್ಲೂ ಪ್ರಥಮವಾಗಿ ಅಂಥ ಹೇಳಿಕೆಯನ್ನು ಪ್ರಧಾನಿ ಚಂದ್ರಶೇಖರ್ ದೇಶದಲ್ಲಿ ನೀಡದೆ 'ನ್ಯೂಯಾರ್ಕ್ ಟೈಮ್ಸ್'ಗೆ ನೀಡಿದ್ದು ಸೂಕ್ತವಾದುದಲ್ಲ.

-'ಡೆಕ್ಕನ್ ಹೆರಾಲ್ಡ್' ಡಿ.20

★ ಅಸ್ಸಾಂ ಮತ್ತು ರಾಷ್ಟ್ರೀಯ ರಾಜಕೀಯ ರಂಗದ ಚಟುವಟಿಕೆಗಳತ್ತ ದೇಶದ ಗಮನ ಹರಿಯುತ್ತಿರುವಾಗ ಪಂಜಾಬ್ ಪರಿಸ್ಥಿತಿ ಈಗಾಗಲೇ ಇರುವುದಕ್ಕಿಂತ ಇನ್ನಷ್ಟು ಹದಗೆಟ್ಟಿದೆ. ಭಯೋತ್ಪಾದಕರು ತಮ್ಮ ದಾಳಿಯನ್ನು ಸುದ್ದಿಮಾಧ್ಯಮದತ್ತ ತಿರುಗಿಸಿರುವುದೊಂದು ಈ ಬಾರಿಯ ವ್ಯತ್ಯಾಸ. ಅದುವೇ ಬಹಳ ಕೆಟ್ಟದ್ದು. ಹಾಗಿರುವಾಗ ಪಂಜಾಬಿ ಭಾಷೆಯನ್ನು ಮಾತ್ರವೇ ಬಳಸಬೇಕೆಂದು ರಾಜ್ಯ ಸರಕಾರಕ್ಕೆ ಭಯೋತ್ಪಾದಕರು ನಿರ್ದೇಶಿಸುತ್ತಿರುವುದು ತುಂಬಾ ಕಳವಳಕರವಾದ ಬೆಳವಣಿಗೆಯಾಗಿದೆ. ಜಲಂಧರ್ ಕೇಂದ್ರ ಹಿಂದಿ ಪ್ರಸಾರ ನಿಲ್ಲಿಸಿರುವುದು ಇನ್ನೊಂದು ಉದಾಹರಣೆ.

............ಇಂಥ ಪರಿಸ್ಥಿತಿಯಲ್ಲಿ ಒಂದೇ ಒಂದು ಪ್ರತಿಕ್ರಿಯೆ ಇರಲು ಸಾಧ್ಯ ಎಂಬುದು ಸ್ಪಷ್ಟ. ತನ್ನ ಅಧಿಕಾರ ನಡೆಯುತ್ತದೆ ಎನ್ನುವುದನ್ನು ತೋರಿಸಬೇಕು ಹಾಗೂ ಭಾರತ ತನ್ನ ಅಧಿಕಾರವನ್ನು ಪ್ರತಿಪಾದಿಸಬೇಕು. ಹಾಗೆ ಮಾಡಲು ವಿಫಲವಾಗುವುದರಿಂದ ದೇಶದ ಸಮಗ್ರತೆಗೆ ಧಕ್ಕೆ ಬರುವುದೆಂದೇ ಅರ್ಥ.

-'ದಿ ಇಕನಾಮಿಕ್ ಟೈಮ್ಸ್' ಡಿ.24

★ ಭೂಪಾಲದಲ್ಲಿರುವ ಪ್ರತಿಷ್ಠಿತ ಕಲಾ ಕೇಂದ್ರವಾದ ಭಾರತ ಭವನದ ಸ್ವಾಯತ್ತೆ ಮೇಲೆ ಆಕ್ರಮಣ ಮಾಡುವ ತಮ್ಮ ಸರಕಾರದ ಕ್ರಮವನ್ನು ದೇಶದ ಪ್ರಮುಖ ಕಲಾವಿದರು ಪ್ರತಿಭಟಿಸಿರುವುದನ್ನು ಗಮನಕ್ಕೆ ತೆಗೆದುಕೊಳ್ಳದ ಮಧ್ಯ ಪ್ರದೇಶ ಮುಖ್ಯಮಂತ್ರಿ ಸುಂದರಲಾಲ್ ಪಟ್ವಾ ತಮ್ಮನ್ನು ತಾವೇ ಅಗೌರವಿಸಿಕೊಂಡಿದ್ದಾರೆ. ಮುಖ್ಯಮಂತ್ರಿಯನ್ನು ಅಧಿಕಾರೇತರ ಅಧ್ಯಕ್ಷ ಮತ್ತು ಸರಕಾರದ ಸಾಂಸ್ಕೃತಿಕ ಕಾರ್ಯದರ್ಶಿಯನ್ನು ಅಧಿಕಾರೇತರ ಕಾರ್ಯದರ್ಶಿಯಾಗಿ ಮಾಡುವ ನಿಟ್ಟಿನಲ್ಲಿ ಭವನದ ಸಂವಿಧಾನದ ತಿದ್ದುಪಡಿ ಮಾಡಲಿಕ್ಕಾಗಿ ಮಸೂದೆಯೊಂದನ್ನು ತರುವ ಅವರ ನಿರ್ಧಾರ ಖಂಡನೀಯವಾಗಿದೆ.

-'ಇಂಡಿಯನ್ ಎಕ್ಸ್‌ಪ್ರೆಸ್' ಡಿ.20

ಸಾರ್ವಜನಿಕ ಉದ್ದಿಮೆಗಳನ್ನು ವಿಫಲಗೊಳಿಸುವ ಪಿತೂರಿ

ಎರಡು ಉದಾಹರಣೆಗಳು

ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳು ದೇಶದ ಸಂಪನ್ಮೂಲವನ್ನು ಪೋಲು ಮಾಡುವ ಬಿಳಿಯಾನೆಗಳು, ಆ ಉದ್ದಿಮೆಗಳ ಕಾರ್ಮಿಕರು ಕೇವಲ ತಮ್ಮ ಸ್ವಾರ್ಥ ಗೋದಿಕೊಳ್ಳುವ ಮಂದಿ ಎಂದು ಅಪಪ್ರಚಾರ ನಡೆಸುವ ತೀವ್ರ ಪ್ರಯತ್ನ ರಾಜೀವ್ ಗಾಂಧಿ ಕಾಲದಲ್ಲಿ ಆರಂಭವಾದದ್ದು ಇಂದಿನ ಅವರ ಕೃಪಾಪೋಷಿತ ಸರಕಾರದವರೆಗೂ ಅವ್ಯಾಹತವಾಗಿ ಸಾಗಿದೆ. ಆದರೆ ಇದು ನಿಜವಾಗಿ ಖಾಸಗಿ ವಿದೇಶೀ ಗುತ್ತೇದಾರಿಗಳ ಪಿತೂರಿಯ ಒಂದು ಭಾಗ. ಅದಕ್ಕೆ ಸ್ವತಂತ್ರ ದೇಶದ ಸಾರ್ವಭೌಮ ಸರ್ಕಾರ ತಲೆಬಾಗಿದುದರ ಉದಾಹರಣೆ ಎಂದು ಬಹಳ ಮಂದಿಗೆ ತಿಳಿದಿಲ್ಲ. ಎಲ್ಲೆಲ್ಲಿ ಅಗತ್ಯವೋ ಅಲ್ಲೆಲ್ಲಾ ಆಧುನಿಕ [illegible] ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಕಾರ್ಮಿಕ ಸಂಘಗಳೇ ಹಲವು ಬಾರಿ ಸೂಚಿಸಿವೆ ಎಂಬುದನ್ನಂತೂ ದೇಶದ ಸುದ್ದಿ ಮಾಧ್ಯಮಗಳೂ ಮರೆ ಮಾಚಿವೆ.

ಬೆಂಗಳೂರಿನಲ್ಲಿ ನಡೆದ ಸಮ್ಮೇಳನದಲ್ಲಿ ಇಂತಹ ಹಲವಾರು ಉದಾಹರಣೆಗಳನ್ನು ಕಾರ್ಮಿಕರ ಪ್ರತಿನಿಧಿಗಳು ಚರ್ಚಿಸಿದರು. ಎರಡು ಉದಾಹರಣೆಗಳು ಇಲ್ಲಿವೆ

ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿದ್ದ ಕಲ್ಕತ್ತೆಯ ನ್ಯಾಶನಲ್ ರಬ್ಬರ್ ಮ್ಯಾನುಫ್ಯಾಕ್ಚರ್ಸ್ ಲಿಮಿಟೆಡ್ ಹಾಗೂ ಇನ್‌ಚೆಕ್ ಟೈರ್ ಲಿಮಿಟೆಡ್ ಕಂಪನಿಗಳನ್ನು ಅಲ್ಲಿಯ ಕಾರ್ಮಿಕರ ಹೋರಾಟ ಹಾಗೂ ಅದಕ್ಕೆ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಬೆಂಬಲದಿಂದಾಗಿ 1984 ರಲ್ಲಿ ರಾಷ್ಟ್ರೀಕರಿಸಿ 1984 ರಲ್ಲಿ ಟೈರ್ ಕಾರ್ಪೋರೇಶನ್ ಆಫ್ ಇಂಡಿಯಾ ರಚಿಸಲಾಯಿತು. ಈಗ ಈ ಉದ್ದಿಮೆಯ ಆಡಳಿತ ವರ್ಗವೇ ಉತ್ಪಾದನೆಯನ್ನು ಬುಡಮೇಲು ಮಾಡುತ್ತಿದೆ. ಅದರ ಉದ್ದೇಶ [illegible] ಹತೋಟಿಯಲ್ಲಿರುವ ಖಾಸಗಿ ಟೈರ್, ರಬ್ಬರ್ ಉದ್ದಿಮೆ [illegible] ಪೂರ್ಣ ಲಾಭ [illegible] ನೀಡುವುದು.

ಹೇಗೆ ಈ ಬುಡಮೇಲು ಕೃತ್ಯ ಸಾಗಿದೆ?. ಉದ್ದಿಮೆಗೆ ಅಗತ್ಯವಾದ ಕಚ್ಚಾ ಮಾಲುಗಳ ಪೂರೈಕೆಯಲ್ಲಿ ಕಡಿತ, ಈ ಕಚ್ಚಾ ಮಾಲುಗಳ ಪೂರೈಕೆಯಲ್ಲಿ ತೊಂದರೆಯಾಗದಂತೆ ಸಾಕಷ್ಟು ಸ್ಟಾಕ್ ಇಟ್ಟುಕೊಳ್ಳಲು ಸೌಲಭ್ಯಗಳಿದ್ದರೂ ಅದರ ಬಳಕೆ ಮಾಡದಿರುವುದು, ಯಂತ್ರಗಳ ದುರಸ್ತಿ ಕಾರ್ಯದಲ್ಲಿ ಬೇಕೆಂದೇ ನಿರ್ಲಕ್ಷ್ಯ, ಹಿಂದಿನ ಆಡಳಿತ ಹೊಸ ಬಾಯ್ಲರ್‌ಗೆ ನೀಡಿದ ಆರ್ಡರನ್ನು ರದ್ದು ಮಾಡಿ ಎಲ್ಲಿಂದಲೋ ಹಳೇ ಬಾಯ್ಲರ್ ಖರೀದಿ, ವಿದ್ಯುತ್ ಪೂರೈಕೆಯಲ್ಲಿ ಲೋಡ್ ಶೆಡ್ಡಿಂಗ್ ಆದಾಗ ಉತ್ಪಾದನೆ ನಿಲ್ಲದಂತೆ ನೋಡಿಕೊಳ್ಳಲು ಇದ್ದ ಜನರೇಟರನ್ನು ಮಾರಿಬಿಟ್ಟದ್ದು, ಇದರಿಂದ ಉತ್ಪಾದನಾ ಸಾಮರ್ಥ್ಯದ ಅರ್ಧಕ್ಕಿಂತಲೂ ಕಮ್ಮಿ ಬಳಕೆ, ಫಲವಾಗಿ 36 ಕೋಟಿ ರೂಗಳ ವಾರ್ಷಿಕ ಉತ್ಪಾದನೆ ಮಾಡಬಲ್ಲ ಈ ಘಟಕದ ಉತ್ಪಾದನೆ 1989-90 ರಲ್ಲಿ 9 ಕೋಟಿ ರೂ. ಗಿಳಿದಿದೆ. ಈ ವರ್ಷ ಮೊದಲ 9 ತಿಂಗಳಲ್ಲಿ 5.3 ಕೋಟಿ ರೂಗಳು!

ಕಳೆದ ಐದು ವರ್ಷಗಳಿಂದ ಸಿ.ಐ.ಟಿ.ಯು.ಗೆ ಸೇರಿದ ಸಂಘ ಈ ಎಲ್ಲಾ ಸಮಸ್ಯೆಗಳತ್ತ ಗಮನ ಸೆಳೆಯುತ್ತಾ ಬಂದಿದ್ದರೂ ಆ ಬಗ್ಗೆ ಕೇಂದ್ರ ಸರ್ಕಾರ ಕೂಡ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಈ ಘಟಕವನ್ನು ರೋಗಗ್ರಸ್ತಗೊಳಿಸುವ ಯೋಜನಾಬದ್ಧ ಪ್ರಯತ್ನವಿದು ಎಂದು ಸಂಘ ಅಂಕಿ-ಸಂಖ್ಯೆಗಳ ಮೂಲಕ ಆಪಾದಿಸಿದೆ. ಮಾತ್ರವಲ್ಲ ಈ ಬಗ್ಗೆ ಸಂಸ್ಥೆಯ ಧರ್ಮನಗರ ಬಳಿ ಡಿಸೆಂಬರ್11 ರಂದು ಒಂದು ಬೃಹತ್ ಸಾಮೂಹಿಕ ಡೆಮ್ಮಾಸ್ಟ್ರೇಶನ್ ಒಯ್ದಿದೆ-ಕಾರ್ಮಿಕರ ಸಂಬಳ ಹೆಚ್ಚಿಸಿ ಎಂದಲ್ಲ-ಈ ಉದ್ದಿಮೆಯ ಉತ್ಪಾದನಾ ಸಾಮರ್ಥ್ಯದ ಕನಿಷ್ಟ 80% ಸಾಮರ್ಥ್ಯವನ್ನು ಹೇಗೆ ಬಳಸಲು ಸಾಧ್ಯ, ಅದಕ್ಕೆ ತಾವು ಎಂತಹ ಸಹಕಾರಕ್ಕೂ ಸಿದ್ಧ ಎಂದು ಹೇಳಲು!

ಇನ್ನೊಂದು ಉದಾಹರಣೆ-ನೌಕಾ ಸಾರಿಗೆ ಉದ್ದಿಮೆಯದ್ದು. ದೇಶದ ರಕ್ಷಣೆಯಲ್ಲಿ ಎರಡನೇ ಹಂತವೆನಿಸಿಕೊಳ್ಳುವ ಈ ಉದ್ದಿಮೆಯನ್ನು ದೇಶದಲ್ಲಿ ನಾಶಮಾಡಿ ವಿದೇಶಿ ಕಂಪನಿಗಳಿಗೆ ಲಾಭ ದೋಚಲು ಸೂಕ್ತ ವಾತಾವರಣ ನಿರ್ಮಿಸಲು ಪ್ರಯತ್ನಿಸಲಾಗುತ್ತಿದೆ-ಸರಕಾರಿ ನಿಷ್ಕ್ರಿಯತೆ ಮತ್ತು ಶಿಪ್ಪಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದ ಆಡಳಿತದ ಅಧಿಕಾರಶಾಹಿ ವರ್ತನೆಯ ಮೂಲಕ. ಒಂದು ದೇಶದ ಉತ್ಪನ್ನಗಳಲ್ಲಿ ಕನಿಷ್ಠ40% ವನ್ನು ಆಯಾ ದೇಶದ ಹಡಗುಗಳಿಗೇ ಮೀಸಲಿಡಬೇಕು ಎನ್ನುವುದು ವಿಶ್ವಸಂಸ್ಥೆಯ ವ್ಯಾಪಾರ ಅಭಿವೃದ್ಧಿ ಸಮಿತಿಯ ಶಿಫಾರಸ್ಸು. ಇದನ್ನು ರಾಷ್ಟ್ರೀಯ ನೌಕಾಸಾರಿಗೆ ಮಂಡಳಿಯೂ ಅನುಮೋದಿಸಿದೆ. ಆದರೆ ಇನ್ನೂ ಅದರ ಅನುಷ್ಠಾನದ ಮಾತೇ ಇಲ್ಲ. ಶಿಪ್ಪಿಂಗ್ ಕಂಪನಿಗಳ ನೌಕರರ, ನಾವಿಕರ ಸಂಘಟನೆಗಳು ಎಷ್ಟೋ ಬಾರಿ ಒತ್ತಾಯಿಸಿದರೂ, ಸಂಸತ್ತಿನ ಪೆಟಿಶನ್ ಕಮಿಟಿ ಹಲವಾರು ಶಿಫಾರಸುಗಳನ್ನು ಮಾಡಿದರೂ ಕೇಂದ್ರ ಸರ್ಕಾರದ ನಿರ್ಲಕ್ಷ್ಯ ಹಾಗೇ ಸಾಗಿದೆ-ವಿದೇಶೀ ಕಂಪನಿಗಳಿಗೆ ಸುಗ್ಗಿ ಒದಗಿಸಲು!

ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಉದ್ದಿಮೆಗಳ ಸಂಘಗಳ ಎರಡನೇ ಅಖಿಲ ಭಾರತ ಸಮ್ಮೇಳನ ಈ ಬಗ್ಗೆ ತನ್ನ ತೀವ್ರ ಬೇಸರವನ್ನು ವ್ಯಕ್ತಪಡಿಸುತ್ತಾ ವಿಶ್ವಸಂಸ್ಥೆಯ ಸಮಿತಿಯ ಶಿಫಾರಸನ್ನು ತಕ್ಷಣ ಜಾರಿಗೊಳಿಸಬೇಕು, ಆಂತರಿಕ ಜಲ ಸಾರಿಗೆ ವ್ಯವಸ್ಥೆ ಒಂದು ಅಗ್ಗದ ಸಾರಿಗೆ ವ್ಯವಸ್ಥೆಯಾಗಿದ್ದು ಅದನ್ನು ಅಭಿವೃದ್ಧಿಪಡಿಸಬೇಕು, ಸಮಸ್ತ ನೌಕಾಸಾರಿಗೆ ಉದ್ದಿಮೆಯನ್ನು ರಾಷ್ಟ್ರೀಕರಿಸಬೇಕು ಎಂದು ಒತ್ತಾಯಿಸಿದೆ.

Printed and published by P Ramachandra Rao on behalf of Communist Party of India (marxist), karnataka State Committee, 95 4 2nd Cross, Muneshwara Block, Palace Guttahalli, Bangalore-560003, Phone 366489 Editor: P.RAMACHANDRA RAO.

ಬೆಂಕಿಪುರ [illegible]